# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038



HAMPI TIMES No.1 Leading Local News Paper
90,000 E-PAPER READERS
94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201





ಸಂಪುಟ:02 • ಸಂಚಿಕೆ: 81 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 22.09.2024 • ಭಾನುವಾರ • ಪುಟ:04 • ಬೆಲೆ:2
Volume:02 • Issue: 81 • PRGI No:KARKAN/2023/88055 • VIJAYANAGARA • 22.09.2024 • Sunday • Page:04 • Rs:2



ಮನಸ್ಸು ಮಾಡು
ಕರ್ತವ್ಯ ನಿಷ್ಠನಾಗು
ಕಾದು ನೋಡು
ಪುಟ: 4ರಲ್ಲಿ ನೋಡಿ

ಈ ಬಾರಿ SSLC ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ!
ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸಲು ಸುಲಭ ಮಾರ್ಗೋಪಾಯಗಳು
ದಿನಕ್ಕೊಂದು ವಿಷಯ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ
SSLC ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿನ ದಿನಕ್ಕೊಂದು ವಿಷಯಗಳನ್ನು ಓದಿಕೊಂಡು ಪರೀಕ್ಷೆಗೆ ಸಿದ್ಧಗೊಳ್ಳಲು
ಹಂಪಿ ಟೈಮ್ಸ್ ಮಾರ್ಗದರ್ಶಿ ಸಹಕಾರಿಯಾಗಲಿದೆ... ಇ-ಪೇಪರ್‌ನಲ್ಲೂ ಲಭ್ಯ...
HAMPI TIMES VIJAYANAGARA
ಹಂಪಿ ಟೈಮ್ಸ್ ಇ-ಪೇಪರ್
94486 33038 www.hampitimes.com / epaper.hampitimes.com Vijayanagara hampitimes@gmail.com

ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿಗಾಗಿ
ಹಂಪಿ ಟೈಮ್ಸ್ ದಿನಪತ್ರಿಕೆ ಓದಿರಿ
ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
94486 33038


# ಹಂಪಿಯಲ್ಲಿ ನೀರಿಗಾಗಿ ಪ್ರವಾಸಿಗರ ಪರದಾಟ

## ಹಂಪಿ ಅಭಿವೃದ್ಧಿ, ಮೂಲಭೂತ ಸೌಲಭ್ಯ ಕಲ್ಪಿಸಲು ಐದಾರು ಇಲಾಖೆಗಳಿದ್ದರೂ ಪ್ರವಾಸಿಗರಿಗೆ ತಪ್ಪದ ನೀರಿನ ಬವಣೆ

## ದೃಷ್ಟಿಬೊಂಬೆಯಂತಾದ ಶುದ್ಧ ಕುಡಿಯುವ ನೀರಿನ ಅರವಟಿಕೆಗಳು | ತುಂಗಭದ್ರೆ ನೆತ್ತಿಯಲ್ಲಿದ್ದರೂ ನೀರಿಗೆ ಹಾಹಾಕಾರ





■ **ಹಂಪಿ ಟೈಮ್ಸ್ ಹೊಸಪೇಟೆ**

ಕಾಲಿದ್ದರೆ ಹಂಪಿ ನೋಡು, ಕಣ್ಣಿದ್ದರೆ ಕನಕಗಿರಿ ನೋಡು ಎಂಬ ಹಿರಿಯರ ಮಾತು ಅಕ್ಷರಶಃ ಸತ್ಯ. ಹಂಪಿಯನ್ನು ನಡೆದಾಡಿ ನೋಡಿದಾಗ ಮಾತ್ರ ಹಂಪಿಯ ಕಲಾವೈಭವ, ಪರಿಸರ, ಪ್ರಕೃತಿದತ್ತಬೆಟ್ಟಗುಡ್ಡಗಳು, ಹರಿಯುವ ನದಿಯನ್ನು ಕಣ್ತುಂಬಿಕೊಂಡು ಇಲ್ಲಿನ ಪ್ರಾಕೃತಿಕ ವೈಭವಕ್ಕೆ ಪ್ರವಾಸಿಗರು ಘುಳಕಿರಾಗುತ್ತಾರೆ. ಆದರೆ ಕಾಲ್ನಡಿಗೆಯಲ್ಲಿ ನಡೆದಾಡಿ ನೋಡುವ ಪ್ರವಾಸಿಗರು ದಾಹ ತಣಿಸಿಕೊಳ್ಳಲು ನೀರಿನ ಅರವಟಿಗೆ ಬಳಿಗೆ ಹೋದರೆ ಹನಿ ನೀರು ಬಾರದು. ಸರ್ಕಾರದ ಅನುದಾನದಲ್ಲಿ ಅಳವಡಿಸಲಾದ ನೀರಿನ ಅರವಟಿಕೆಗಳು ದೃಷ್ಟಿಬೊಂಬೆಗಳಂತಿವೆ. ಹಂಪಿಯಲ್ಲಿ ಐದಾರು ಇಲಾಖೆಗಳು ಕಾರ್ಯನಿರ್ವಹಿಸುತ್ತಿದ್ದರೂ ಪ್ರವಾಸಿಗರಿಗೆ ಕುಡಿಯುವ ನೀರು ಪೂರೈಸದಿರುವುದು ವಿಪರ್ಯಾಸ. ಅಧಿಕಾರಿಗಳ ಇಚ್ಛಾಶಕ್ತಿ ಕೊರತೆ ಎನ್ನುವದಕ್ಕೆ ಇಲ್ಲಿನ ದೃಷ್ಟಿಬೊಂಬೆಗಳಂತಿರುವ ನೀರಿನ ಅರವಟಿಕೆಗಳು, ಮುರಿದ ಟ್ಯಾಂಕ್‌ಗಳು, ಕಾರ್ಯನಿರ್ವಹಿಸದ ಮೋಟರ್‌ಗಳೇ ಸಾಕ್ಷಿ ಎನ್ನುತ್ತಿದ್ದಾರೆ ಪ್ರವಾಸಿಗರು.





ಹಂಪಿ, ಭಾರತದ ಅತ್ಯಂತ ಪ್ರಸಿದ್ಧ ಪುರಾತನ ನಗರಗಳಲ್ಲಿ ಒಂದಾಗಿದ್ದು, ಯುನೆಸ್ಕೋ ವಿಶ್ವ ಹೆರಿಟೇಜ್ ತಾಣವಾಗಿ ಗುರುತಿಸಲಾಗಿದೆ. ದಿನೇ ದಿನೇ ಪ್ರವಾಸಿಗರ ಸಂಖ್ಯೆ ಇಲ್ಲಿ ಹೆಚ್ಚುತ್ತಿದ್ದು, ಜನಸಂದಣಿಯು ನಿರಂತರವಾಗಿ ಬೆಳೆಯುತ್ತಿದೆ.

ಆದರೆ, ಇಂತಹ ಐತಿಹಾಸಿಕ ತಾಣಕ್ಕೆ ಬರುತ್ತಿರುವ ಪ್ರವಾಸಿಗರು ಕುಡಿಯುವ ನೀರಿನ ಅಭಾವದಿಂದಾಗಿ ತತ್ತರಿಸುತ್ತಿದ್ದಾರೆ. ಪಕ್ಕದಲ್ಲೆ ಏಳು ದಶಕಗಳಿಂದ ತುಂಗಭದ್ರೆ ತುಂಬಿ ಹರಿಯುತ್ತಿದ್ದರೂ, ಹಂಪಿ ಪ್ರವಾಸಿ ತಾಣಗಳಲ್ಲಿ ನೀರಿನ ಬವಣೆ ತಪ್ಪಿಲ್ಲ. ಹಂಪಿ ಪ್ರದೇಶದಲ್ಲಿ ಪ್ರವಾಸಿಗರು ತೀವ್ರ ನೀರಿನ ಸಮಸ್ಯೆ ಅನುಭವಿಸುತ್ತಿದ್ದಾರೆ. ಬಿಸಿಲಿನ ತೀವ್ರತೆಯ ನಡುವೆ, ನೀರಿನ ಸಮಸ್ಯೆ ಪ್ರವಾಸಿಗರನ್ನು ಕಂಗೆಡಿಸುತ್ತಿದೆ. ಬಸ್ ನಿಲ್ದಾಣಗಳು, ಪ್ರವಾಸಿ ಕೇಂದ್ರಗಳು, ಮತ್ತು ಪ್ರಮುಖ ವೀಕ್ಷಣಾ ತಾಣಗಳಲ್ಲಿಯೂ ಕೂಡ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಅತೀ ಕಡಿಮೆಯಾಗಿರುವುದು ಗೋಚರಿಸುತ್ತದೆ. ಪ್ರವಾಸಿಗರು ದೂರದ ಅಂಗಡಿಗಳಿಂದ ಬಾಟಲ್ ನೀರನ್ನು ಖರೀದಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು, ಇದು ಪ್ರವಾಸಿಗರಿಗೆ ಹೆಚ್ಚುವರಿ ಆರ್ಥಿಕ ಹೊರೆಯಾಗುತ್ತಿದೆ.



**ಸ್ಥಳೀಯ ಅಧಿಕಾರಗಳ ನಿರ್ಲಕ್ಷ್ಯ:** ಪ್ರವಾಸಿ ತಾಣವೊಂದರಲ್ಲಿ ಮೂಲಸೌಕರ್ಯಗಳ ವ್ಯವಸ್ಥೆ ಅತ್ಯಂತ ಮುಖ್ಯ. ಆದರೆ, ಹಂಪಿಯ ಪ್ರವಾಸಿ ದಾರಿಯಲ್ಲಿ ಈ ಸಮಸ್ಯೆಯು ಪ್ರವಾಸಿಗರನ್ನು ನಿರಂತರವಾಗಿ ಕಾಡಲಾರಂಭಿಸಿದೆ. ಹಂಪಿ ಪ್ರವಾಸಿ ಹಾಗೂ ಧಾರ್ಮಿಕ ಕ್ಷೇತ್ರವಾಗಿದೆ. ಹಂಪಿ ಭಾಗದ ಅಭಿವೃದಿಗಾಗಿ ಗ್ರಾಮ ಪಂಚಾಯಿತಿ, ಹಂಪಿ ಅಭಿವೃದ್ಧಿ ಪ್ರಾಧಿಕಾರ, ಧಾರ್ಮಿಕ ದತ್ತಿ ಇಲಾಖೆ, ರಾಜ್ಯ ಮತ್ತು ಕೇಂದ್ರ ಪುರಾತತ್ವ ಇಲಾಖೆ, ಪ್ರವಾಸೋಧ್ಯಮ ಇಲಾಖೆ ಅಧಿಕಾರಿಗಳು ಆಡಳಿತ ನಡೆಸುತ್ತಿದ್ದರೂ ನೀರಿನ ಸಮಸ್ಯೆ ಇಂದಿಗೂ ಪರಿಹಾರಗೊಂಡಿಲ್ಲದಿರುವುದಕ್ಕೆ ಪ್ರವಾಸಿಗರು ಆಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಪ್ರವಾಸಿ ತಾಣಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿರುವ ಪ್ರವಾಸಿಗರನ್ನು ಗಮನದಲ್ಲಿಟ್ಟು, ಸೂಕ್ತ ಕುಡಿಯುವ ನೀರಿನ ಪೂರೈಕೆ, ಪ್ರವಾಸಿ ಮಾರ್ಗದಲ್ಲಿ ಮಹಿಳೆಯರು ಮತ್ತು ಪುರುಷರ ಶೌಚಾಲಯಗಳ ಸೌಲಭ್ಯ ಕಲ್ಪಿಸಬೇಕು ಎಂಬುದು ಪ್ರವಾಸಿಗರ ಒತ್ತಾಯವಾಗಿದೆ.

---

### ಮೈಕ್ರೋ ನ್ಯೂಸ್

## ಇಂದು ಮುಖ್ಯಮಂತ್ರಿ, ಸಚಿವರಿಂದ ತುಂಗಭದ್ರೆಗೆ ಬಾಗಿನ ಸಮರ್ಪಣೆ

**ಹಂಪಿ ಟೈಮ್ಸ್ ಹೊಸಪೇಟೆ**



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಿಸಿಎಂ ಡಿ.ಕೆ.ಶಿವಕುಮಾರ ಹಾಗೂ ಸಚಿವರೊಂದಿಗೆ ಸೆ. 22ರಂದು ಬೆಳಿಗ್ಗೆ 11.45ಕ್ಕೆ ತುಂಗಭದ್ರಾ ಜಲಾಶಯಕ್ಕೆ ಬಾಗಿನ ಸಮರ್ಪಣೆಗೆ ಮಾಡಿ, ಕೊಪ್ಪಳ ಜಿಲ್ಲೆಯ ಮುನಿರಾಬಾದ್‌ಗೆ ತೆರಳಿ ಮುನಿರಾಬಾದ್ ಸರ್ಕಾರಿ ಪ್ರೌಢಶಾಲೆ ಮೈದಾನದಲ್ಲಿ ಆಯೋಜಿಸಿರುವ, ತುಂಗಭದ್ರಾ ಜಲಾಶಯದ ಗೇಟ್ ನಂ.19ರ ದುರಸ್ತಿ ಕಾರ್ಯದಲ್ಲಿ ಭಾಗಿಯಾದ ಅಧಿಕಾರಿ, ಸಿಬ್ಬಂದಿ, ಕಾರ್ಮಿಕರಿಗೆ ಅಭಿನಂದನೆ ಹಾಗೂ ಕೊಪ್ಪಳ ವಿಧಾನಸಭಾ ಕ್ಷೇತ್ರದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ, ಲೋಕಾರ್ಪಣೆ ಹಾಗೂ ಕೊಪ್ಪಳ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇಮಕವಾದ ಪೌರ ಕಾರ್ಮಿಕರಿಗೆ ಸಾಂಕೇತಿಕವಾಗಿ ನೇಮಕಾತಿ ಆದೇಶ ಪತ್ರ ವಿತರಣೆ ಮಾಡಲಿದ್ದಾರೆ. ಮಧ್ಯಾಹ್ನ 3.30ಕ್ಕೆ ಜಲಾಶಯದಿಂದ ನಿರ್ಗಮಿಸಿ ಕೊಪ್ಪಳ ಜಿಲ್ಲೆಯ ಗಿಣಿಗೇರಾ ಏರ್‌ಸ್ಟ್ರಿಪ್‌ನಿಂದ ಬೆಂಗಳೂರಿಗೆ ವಿಶೇಷ ವಿಮಾನದ ಮೂಲಕ ಪ್ರಯಾಣ ಬೆಳೆಸುವರು ಎಂದು ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿಗಳು ತಿಳಿಸಿದ್ದಾರೆ.

---

## ಆರೋಗ್ಯ ಇಲಾಖೆಯ ವಿವಿಧ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಸಾಲಿನ ರಾಷ್ಟ್ರೀಯ ಆರೋಗ್ಯ ಅಭಿಯಾನ ಜಿಲ್ಲಾ ರೋಗವಾಹಕಗಳ ನಿಯಂತ್ರಣ ಕಾರ್ಯಕ್ರಮದಡಿ ಜಿಲ್ಲೆಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ಭರ್ತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಅಕ್ಟೋಬರ್ 5 ಕೊನೆದಿನಾಂಕ ಆಗಿರುತ್ತದೆ.

ಜಿಲ್ಲಾ ವಿ.ಬಿ.ಡಿ ಸಲಹೇಗಾರ ಒಂದು ಹುದ್ದೆ, ಸಹಾಯಕ ಹಣಕಾಸು ಮತ್ತು ಲಾಜಿಸ್ಟಿಕ್ಸ್ ಒಂದು ಹುದ್ದೆ ಖಾಲಿಯಿದ್ದು, ಹುದ್ದೆಗಳ ಸಂಖ್ಯೆಯಲ್ಲಿ ಹೆಚ್ಚುಗೊಳಿಸುವುದು ಅಥವಾ ಕಡಿಮೆಗೊಳಿಸುವುದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದ ನಿರ್ಧಾರದಂತಿರುತ್ತದೆ. ಆಯ್ಕೆಯ ಪ್ರಕ್ರಿಯೆ ಯಾವುದೇ ಬದಲಾವಣೆಯಾದರು ಆಯ್ಕೆ ಸಮಿತಿ ತೀರ್ಮಾನವೇ ಅಂತಿಮವಾಗಿರುತ್ತದೆ. ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳ ಶೇಕಡ ಮೆರಿಟ್ ಲೀಸ್ಟನ್ನು ತಯಾರಿಸಲಾಗುವುದು ಮತ್ತು ಹೊಸ ರೋಸ್ಟರ್ ಆಧಾರದ ಮೇಲೆ ಮೇರಿಟ್ ಕಂ ರೋಸ್ಟರ್ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ನೇಮಕಾತಿ ಮಾಡಲಾಗುವುದು.

ಅರ್ಜಿಯನ್ನು ಹೊಸಪೇಟೆಯ 60 ಹಾಸಿಗೆಯ ಎಮ್.ಸಿ.ಹೆಚ್ ಆಸ್ಪತ್ರೆ ಹಿಂಬಾಗ ಮಸೀದಿ ಹತ್ತಿರವಿರುವ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯದಲ್ಲಿ ಅಕ್ಟೋಬರ್ 5ರ ಸಂಜೆ 05.30ರ ಒಳಗೆ ಸ್ವೀಕರಿಸಲಾಗುವುದು. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಎಂದು ಜಿಲ್ಲಾ ವಿ.ಬಿ.ಡಿ.ಸಿ ಅಧಿಕಾರಿಗಳು ಹಾಗೂ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

---

## ಪಡಿತರ ದಾನ್ಯ ಮಾರಿದರೆ ಕಾನೂನು ಕ್ರಮ

■ **ಹಂಪಿ ಟೈಮ್ಸ್ ಹೊಸಪೇಟೆ**

ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿಲ್ಲಿ ವಿತರಿಸುವ ಆಹಾರ ದನ್ಯಾಗಳನ್ನು ಹಣದ ಆಮಿಷಕ್ಕೆ ಒಳಾಗಾಗಿ ಮಾರಾಟ ಮಾಡಿದರೆ ಅಂತಹ ಪಡಿತರ ಚೀಟಿದಾರರಿಗೆ ವಿತರಿಸಲಾದ ಆಹಾರ ಧಾನ್ಯಗಳಿಗೆ ಮುಕ್ತ ಮಾರುಕಟ್ಟೆ ದರದಲ್ಲಿ ದಂಡ, ಪಡಿತರ ಚೀಟಿಯನ್ನು ಅಮಾನತ್ತಿನಲ್ಲಿಟ್ಟು, ನಿಯಮಾನುಸಾರ ಕಾನೂನು ಕ್ರಮ ಜರುಗಿಸಲಾಗುವುದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರು ತಿಳಿದ್ದಾರೆ.

ಜಿಲ್ಲೆಯಲ್ಲಿನ ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿಗೆ 21 ಕೆ.ಜಿ ಸಾರವರ್ಧಿತ ಅಕ್ಕಿ ಮತ್ತು 14 ಕೆ.ಜಿ. ರಾಗಿ ಹಾಗೂ ಆದ್ಯತಾ ಪಡಿತರ ಚೀಟಿ ಯಲ್ಲಿನ ಪ್ರತಿ ಸದಸ್ಯರಿಗೆ 3 ಕೆ.ಜಿ. ಸಾರವರ್ಧಿತ ಅಕ್ಕಿ ಮತ್ತು 2 ಕೆ.ಜಿ ರಾಗಿ ಆಹಾರ ಧಾನ್ಯವನ್ನು ಘನ ಸರ್ಕಾರದಿಂದ ಪ್ರತಿ ಮಾಹೆ ಉಚಿತವಾಗಿ ವಿತರಿಸಲಾಗುತ್ತಿದೆ. ಆದ್ದರಿಂದ, ಜಿಲ್ಲೆಯಲ್ಲಿನ ಪಡಿತರ ಚೀಟಿದಾರರು ಆಹಾರ ಧಾನ್ಯಗಳನ್ನು ಯಾವುದೇ ಕಾರಣಕ್ಕೂ ಹಣದ ಆಮಿಷಕ್ಕೆ ಒಳಗಾಗಿ ಅನಧಿಕೃತವಾಗಿ ಮಾರಾಟ ಅಥವಾ ಅಕ್ರಮವಾಗಿ ಸಂಗ್ರಹಣೆ ಮಾಡಬಾರದೆಂದು ಪಡಿತರ ಚೀಟಿದಾರರಿಗೆ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಪ್ರಕಟಣೆ ತಿಳಿಸಿದೆ.

---

## ಟಿಎಸ್‌ಆರ್, ಮೊಹರೆ ಹಣಮಂತರಾಯ ಪತ್ರಿಕೋದ್ಯಮ ಪ್ರಶಸ್ತಿ ಪ್ರಕಟ

■ **ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ಪತ್ರಿಕೋದ್ಯಮದಲ್ಲಿ ಅನುಪಮ ಸೇವೆ ಸಲ್ಲಿಸಿದ ಪತ್ರಕರ್ತರಿಗೆ ನೀಡುವ ಟಿ.ಎಸ್.ರಾಮಚಂದ್ರರಾವ್ (ಟಿಎಸ್‌ಆರ್) ಪತ್ರಿಕೋದ್ಯಮ ಪ್ರಶಸ್ತಿ ಹಾಗೂ ಕನ್ನಡ ಪತ್ರಿಕೆ ಅಥವಾ ಪತ್ರಿಕಾ ಸಮೂಹವನ್ನು ಕಟ್ಟಿ ಬೆಳೆಸಿದ ಪತ್ರಕರ್ತರ ಸಾಧನೆ ಗುರುತಿಸಿ ನೀಡುವ ಮೊಹರೆ ಹಣಮಂತರಾಯ ಪತ್ರಿಕೋದ್ಯಮ ಪ್ರಶಸ್ತಿಗಳನ್ನು ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಪ್ರಕಟಿಸಿದೆ.

ಟಿಯೆಸ್ಸಾರ್ ಪತ್ರಿಕೋದ್ಯಮ ಪ್ರಶಸ್ತಿ: ಕನ್ನಡ ಪತ್ರಿಕೋದ್ಯಮದಲ್ಲಿ ಅನುಪಮ ಸೇವೆ ಸಲ್ಲಿಸುವ ಪತ್ರಕರ್ತರೊಬ್ಬರಿಗೆ ಅವರ ನೆನಪಿನಲ್ಲಿ 1993ರಿಂದ ಕರ್ನಾಟಕ ಸರ್ಕಾರ ಪ್ರತಿ ವರ್ಷ 'ಟಿಯೆಸ್ಸಾರ್ ಪತ್ರಿಕೋದ್ಯಮ ಪ್ರಶಸ್ತಿ' ನೀಡುತ್ತದೆ. ಈ ಪ್ರಶಸ್ತಿ ಮೊತ್ತ 2 ಲಕ್ಷ ರೂಪಾಯಿಗಳು ನಗದು ಹಾಗೂ ಸ್ಮರಣಿಕೆಗಳನ್ನು ಒಳಗೊಂಡಿದೆ. 2018 ರವರೆಗೆ 26 ಜನ ಹಿರಿಯ ಪತ್ರಕರ್ತರಿಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. 2019 ರಿಂದ 2023 ರವರೆಗಿನ 5 ವರ್ಷಗಳ ಅವಧಿಯ ಪ್ರಶಸ್ತಿಗಳನ್ನು ಇದೀಗ ಸರ್ಕಾರ ಪ್ರಕಟಿಸಿದೆ. 2019ನೇ ಸಾಲಿಗೆ ಶಿವಾಜಿ ಎಸ್ ಗಣೇಶನ್, 2020ನೇ ಸಾಲಿಗೆ ಶ್ರೀಕಾಂತಾಚಾರ್ಯ.ಆರ್.ಮಣೂರ, 2021ನೇ ಸಾಲಿಗೆ ಡಾ.ಆರ್.ಪೂರ್ಣಿಮಾ ಮತ್ತು 2022ನೇ ಸಾಲಿಗೆ ಡಾ.ಪದ್ಮರಾಜ ದಂಡಾವತಿ ಹಾಗೂ 2023ನೇ ಸಾಲಿಗೆ ಡಾ.ಸರಜೂ ಕಾಟ್ಕರ್ ಅವರಿಗೆ ಈ ಪುರಸ್ಕಾರ ನೀಡಲಾಗಿದೆ.

ಮೋಹರೆ ಹಣಮಂತರಾಯ ಪತ್ರಿಕೋದ್ಯಮ ಪ್ರಶಸ್ತಿ: ಕನ್ನಡ ಪತ್ರಿಕಾ ರಂಗದ ಭೀಷ್ಮ ಎಂದೇ ಹೆಸರಾದ ಮೊಹರೆ ಹಣಮಂತರಾಯರ ಅವರ ಹೆಸರಿನಲ್ಲಿ ಈ ಪ್ರಶಸ್ತಿ ನೀಡಲಾಗುತ್ತದೆ. ಕನ್ನಡ ಪತ್ರಿಕೆ ಅಥವಾ ಪತ್ರಿಕಾ ಸಮೂಹವನ್ನು ಕಟ್ಟಿ ಬೆಳೆಸಿದ ಪತ್ರಕರ್ತರ ಸಾಧನೆಯನ್ನು ಗುರುತಿಸಿ ಇವರ ಸ್ಮರಣಾರ್ಥ 'ಮೊಹರೆ ಹಣಮಂತರಾಯ ಪತ್ರಿಕೋದ್ಯಮ >>4

---

## ವಿಜಯನಗರ ಜಿಲ್ಲೆಯಾದ್ಯಂತ ತಾಲೂಕು ಮಟ್ಟದ ದಸರಾ ಕ್ರೀಡಾಕೂಟ ಸೆ.23,25 ರಂದು

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಶಾಲಾ ಶಿಕ್ಷಣ ಇಲಾಖೆಯ ಸಂಯುಕ್ತಾಶಯದಲ್ಲಿ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ತಾಲೂಕು ಮಟ್ಟದ ದಸರಾ ಕ್ರೀಡಾಕೂಟವನ್ನು ಸೆಪ್ಟಂಬರ್ 23 ಮತ್ತು ಸೆ.25ರಂದು ಆಯೋಜಿಸಲಾಗಿದೆ.

ಸೆ.23ರಂದು ಹೊಸಪೇಟೆಯ ಜಿಲ್ಲಾ ಕ್ರೀಡಾಂಗಣ ಮತ್ತು ಹೂವಿನಹಡಗಲಿ ತಾಲೂಕು ಕ್ರೀಡಾಂಗಣದಲ್ಲಿ ಹಾಗೂ ಸೆ.25ರಂದು ಹಗರಿಬೊಮ್ಮನಹಳ್ಳಿಯ ತಾಲೂಕು ಕ್ರೀಡಾಂಗಣ, ಕೂಡ್ಲಿಗಿಯ ಜೂನಿಯರ್ ಕಾಲೇಜು ಮೈದಾನ, ಕೊಟ್ಟೂರಿನ ಜೂನಿಯರ್ ಕಾಲೇಜು ಮೈದಾನ ಮತ್ತು ಹರಪನಹಳ್ಳಿಯ ತಾಲ್ಲೂಕು ಕ್ರೀಡಾಂಗಣದಲ್ಲಿ ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟವನ್ನು ಏರ್ಪಡಿಸಲಾಗಿದೆ.

**ಕ್ರೀಡೆಗಳು:** ಅಥ್ಲೆಟಿಕ್ಸ್, ವಾಲಿಬಾಲ್, ಫುಟ್ಬಾಲ್, ಖೋ–ಖೋ, ಕಬಡ್ಡಿ, ಥ್ರೋಬಾಲ್ ಮತ್ತು ಯೋಗವನ್ನು ಆಯೋಜಿಲಾಗಿದೆ. **ನಿಯಮಗಳು:** ತಾಲೂಕು ಮಟ್ಟದ ದಸರಾ ಕ್ರೀಡಾಕೂಟ ಸ್ಫರ್ಧೆಗಳಲ್ಲಿ ಭಾಗವಹಿಸಿಲು ಕರ್ನಾಟಕ ರಾಜ್ಯದಲ್ಲಿ ವಾಸಿಸುವ ಕ್ರೀಡಾಪಟುಗಳು ಮಾತ್ರ ಅರ್ಹರಿರುತ್ತಾರೆ, ರಕ್ಷಣಾಪಡೆ, ಅರೆ ರಕ್ಷಣಾಪಡೆಗೆ ಸೇರಿದ ಕ್ರೀಡಾಪಟುಗಳಿಗೆ ಭಾಗವಹಿಸಲು ಅರ್ಹರಲ್ಲ, ಆಯಾ ತಾಲೂಕಿನ ಕ್ರೀಡಾಪಟು ಅಥವಾ ತಂಡ ಅದೇ ತಾಲೂಕಿನ ಕ್ರೀಡಾಕೂಟದಲ್ಲಿ ಭಾಗವಹಿಸಬೇಕು. ಬೇರೆ ತಾಲೂಕಿನವರು ಅಥವಾ ಜಿಲ್ಲಾಯವರು ಆ ತಾಲೂಕಿನಲ್ಲಿ ಭಾಗವಹಿಸಲು ಪ್ರಸುತ್ತ ಅದೇ ತಾಲೂಕಿನಲ್ಲಿ ವ್ಯಾಸಂಗ ಮಾಡುವ ಗುರುತಿನ ಪತ್ರ ಮತ್ತು ಆಧಾರ ಕಾರ್ಡ್ ನೀಡಬೇಕು., ಸ್ಪರ್ಧಿಗಳು ಕೇವಲ 1 ಗುಂಪು ಆಟದಲ್ಲಿ ಮಾತ್ರ ಭಾಗವಹಿಸಬೇಕು, ನಿರ್ಣಾಯಕರ ಅಥವಾ ಇಲಾಖೆಯ ನಿರ್ಣಯವೇ ಅಂತಿಮವಾಗಿರುತ್ತದೆ ಹಾಗೂ ಯೋಗ ಸ್ಪರ್ಧೆಯಲ್ಲಿ ಭಾಗವಹಿಸುಸುವರು ಕಡ್ಡಾವಾಗಿ ವೀರಭದ್ರಾಸನ, ಜಾನು ಶಿರಶಾಸನ, ಹಲಾಸನ, ಧನುರಾಸನ ಹಾಗೂ ಮೂರು ಐಚ್ಛಿಕ ಆಸನಗಳನ್ನು ಪ್ರದರ್ಶಿಸಬೇಕು. ಕಡ್ಡಾಯ ಆಸನ ಮತ್ತು ಐಚ್ಛಿಕ ಆಸಾನಗಳಲ್ಲಿ 10 ಸೆಕೆಂಡುಗಳ ಕಾಲ ಅಂತಿಮ ಸ್ಥಿತಿಯಲ್ಲಿ ನಿಲ್ಲಬೇಕು.

ಹೆಚ್ಚಿನ ಮಾಹಿತಿಗಾಗಿ ದೈಹಿಕ ಶಿಕ್ಷಣ ಪರಿವೀಕ್ಷಕರು ಹೊಸಪೇಟೆ ಮೊ.ಸಂ: 7026101408, ದೈಹಿಕ ಶಿಕ್ಷಣ ಪರಿವೀಕ್ಷಕರು ಹೂವಿನಹಡಗಲಿ ಮೊ.ಸಂ: 9900751867, ದೈಹಿಕ ಶಿಕ್ಷಣ ಪರಿವೀಕ್ಷಕರು ಹಗರಿಬೊಮ್ಮನಹಳ್ಳಿ ಮೊ.ಸಂ: 9986675441, ದೈಹಿಕ ಶಿಕ್ಷಣ ಪರಿವೀಕ್ಷಕರು ಕೂಡ್ಲಿಗಿ ಮತ್ತು ಕೊಟ್ಟೂರು ಮೊ.ಸಂ: 9916767880 ಮತ್ತು ದೈಹಿಕ ಶಿಕ್ಷಣ ಪರಿವೀಕ್ಷಕರು ಹರಪನಹಳ್ಳಿ ಮೊ.ಸಂ: 9916767880 ರವರಿಗೆ ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

## ಗೃಹಲಕ್ಷ್ಮಿಗೇಕೆ ತೊಡಕು ?




ರಾಜ್ಯ ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆ ಯಾಕೋ ಏನೋ ಕುಂಟುತ್ತ ಸಾಗಿದೆ ಎಂಬ ಅನುಮಾನ ಮೂಡಿದೆ. ಪಂಚ ಗ್ಯಾರಂಟಿಗಳನ್ನು ಘೋಷಿಸಿ, ರಾಜ್ಯದಲ್ಲಿ ಸರ್ಕಾರ ರಚನೆ ಮಾಡಿದ ಕಾಂಗ್ರೆಸ್ ಗೃಹಲಕ್ಷ್ಮಿ ವಿಷಯದಲ್ಲಿ ಯಾಕೋ ಎಡವುತ್ತಿದೆ ಎಂಬುದು ಸ್ಪಷ್ಟ. ಹಾಗಂತ ಗೃಹಲಕ್ಷ್ಮಿಯ ಎರಡು ಸಾವಿರ ಬಂದೇ ಇಲ್ಲ ಅಂತಲ್ಲ. ಅದು ನಿಯಮಿತವಾಗಿ ಬರುತ್ತಿಲ್ಲವೆಂಬುದು ರಾಜ್ಯದ ಮಹಿಳಾ ಫಲಾನುಭವಿಗಳ ಬಲವಾದ ಆರೋಪ. ಒಮ್ಮೆ ಬಂದರೆ ಮತ್ತೆರಡು ತಿಂಗಳಿಗೆ ಬರುತ್ತೆ. ಕೆಲವೊಮ್ಮೆ ಒಂದೇ ತಿಂಗಳಲ್ಲಿ ಎರಡೆರಡು ಬಾರಿ ಬಂದಿರುವ ಉದಾಹರಣೆಗಳೂ ಇವೆ. ಇದಕ್ಕೊಂದು ನಿಗದಿತ ದಿನ ಎಂಬುದಿಲ್ಲ. ಪ್ರತಿ ತಿಂಗಳು ಅನಕ್ಷರಸ್ಥ ಮಹಿಳೆಯರು ಬ್ಯಾಂಕುಗಳ ಮುಂದೆ ಸರದಿಯಲ್ಲಿ ನಿಂತು, ಹಣ ಬಂದಿದೆಯೇ ಎಂದು ಪರಿಶೀಲನೆ ಮಾಡಿಕೊಳ್ಳುವುದೇ ಕಾಯಕವಾಗಿದೆ. ಅದರಲ್ಲೂ ಪಕ್ಕದ ಮನೆಯವರಿಗೆ ಬಂದಿರುತ್ತದೆ. ತನಗೆ ಬಂದಿಲ್ಲವೆಂದು ಮಹಿಳೆಯರು ಬೇಸರ ಪಟ್ಟುಕೊಳ್ಳುತ್ತಿದ್ದಾರೆ. ಆರ್ಥಿಕವಾಗಿ ಸವಾಲು ಎದುರಿಸುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರದಿಂದ ಸರಿಯಾಗ ಆಯಾ ತಿಂಗಳಲ್ಲಿ ಮಹಿಳಾ ಫಲಾನುಭವಿಗಳಿಗೆ ಹಣ ಜಮಾ ಮಾಡುವಲ್ಲಿ ವಿಫಲವಾಗುತ್ತಿದೆ. ಮಹಿಳಾ ಫಲಾನುಭವಿಗಳು ಇಂದು ಬರುತ್ತೆ.. ನಾಳೆ ಬರುತ್ತೇನೋ ಎಂದು ನಿರೀಕ್ಷೆಯಲ್ಲೇ ಕಾಲ ತಳ್ಳುತ್ತಿದ್ದಾರೆ. ಇದೊಂದು ಉತ್ತಮ ಯೋಜನೆ ಎಂಬುದು ಎರಡು ಮಾತಿಲ್ಲ. ಎಷ್ಟು ಕುಟುಂಬಗಳಲ್ಲಿ ಮಹಿಳೆಯ ಪಾಲಿಕಗೆ ಈ ಎರಡು ಸಾವಿರ ರೂಪಾಯಿಗಳು ಯಾವುದೋ ಖರ್ಚಿಗೆ ಅನುಕೂಲವಾಗುತ್ತಿದೆ. ಸಮಸ್ಯೆಯೆಂದರೆ ನಿಯಮಿತವಾಗಿ ಬಾರದೆ ಇರುವುದು. ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಪ್ರತಿ ತಿಂಗಳು ನಿಗದಿತ ದಿನದಂದು ಬ್ಯಾಂಕಿನ ಅಕೌಂಟಿಗೆ ಜಮಾ ಮಾಡುವಂಥ ವ್ಯವಸ್ಥೆ ಕಲ್ಪಿಸಿದರೆ ಮಾತ್ರವೇ ಯೋಜನೆಗೆ ಬಲ ಬರಲು ಸಾಧ್ಯವಿದೆ. ಗ್ಯಾರಂಟಿ ಯೋಜನೆಗಳಲ್ಲಿ ಎರಡು ಗ್ಯಾರಂಟಿ ಮಾತ್ರ ಉತ್ತಮವಾಗಿ ಸಾಗುತ್ತಿದೆ. ಮೊದಲನೆಯದು ಶಕ್ತಿ ಯೋಜನೆ ಗ್ಯಾರಂಟಿ. ರಾಜ್ಯದ ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರ ಉಚಿತ ಪಯಣ ಯಾವುದೇ ಅಡೆತಡೆಗಳಿಲ್ಲದೆ ಸುಗಮವಾಗಿ ಸಾಗುತ್ತಿದೆ. ಎರಡನೆಯದಾಗಿ ಗೃಹಜ್ಯೋತಿ ಯೋಜನೆ. ಈ ಫಲಾನುಭವಿಗಳು ಸಹ ನಿರಾಂತಕವಾಗಿ ಯೋಜನೆಯ ಲಾಭ ಕಾಣುತ್ತಿದ್ದಾರೆ. ಮೂರನೇ ಮತ್ತು ಪ್ರಮುಖ ಯೋಜನೆಯಾದ ಗೃಹಲಕ್ಷ್ಮಿ ಗ್ಯಾರಂಟಿಯೇ ಕುಟುಂತ್ತ ಸಾಗಿರುವುದು ಬೇಸರದ ವಿಷಯ. ಈ ಹಣವನ್ನೇ ನಂಬಿಕೊಂಡ ಹಲವು ಕುಟುಂಬಗಳು ಕುಳಿತಿವೆ. ಆದರೆ, ಪ್ರತಿ ತಿಂಗಳು ಹಣ ಬಾರದೆ ಆರ್ಥಿಕ ಚಟುವಟಿಕೆಗಳಲ್ಲಿ ವ್ಯತ್ಯಾಸವಾಗುತ್ತಿದೆ. ಯೋಜನೆ ಘೋಷಣೆ ಮಾಡುವುದಕ್ಕೂ ಮೊದಲು ಅದರ ಅನುಷ್ಠಾನದ ಬಗ್ಗೆ ಯೋಚಿಸಿರಬೇಕು. ಸಾಧಕ–ಬಾಧಕಗಳ ತಿಳಿವಳಿಕೆ ಹೊಂದಿರಬೇಕು. ಆದರೆ, ಇದಾವುದೂ ಇಲ್ಲದೆ ಕೇವಲ ಮತಗಳಿಕೆಗಾಗಿ ಬೃಹತ್ ಪ್ರಮಾಣದ ಹಣ ವ್ಯಯಿಸುವ ಇಂಥ ಯೋಜನೆಗಳಿಂದ ಬಡವರಿಗೂ ಅನುಕೂಲ ಮತ್ತು ಸರ್ಕಾರಕ್ಕೂ ಉತ್ತಮ ಹೆಸರು ಬರುವುದು ಕಷ್ಟ. ಈಗಲೂ ಕಾಲ ಮಿಂಚಿಲ್ಲ. ಪ್ರತಿ ತಿಂಗಳು ತಪ್ಪದೆ ನಿಯಮಿತವಾಗಿ ಗೃಹಲಕ್ಷ್ಮಿ ಹಣವನ್ನು ಫಲಾನುಭವಿಗಳ ಖಾತೆಗೆ ತಲುಪಿಸುವ ಜವಾಬ್ದಾರಿಯನ್ನು ಸರ್ಕಾರ ಹೊಂದಲಿ ಮತ್ತು ಆ ನಿಟ್ಟಿನಲ್ಲಿ ಉತ್ತಮವಾದ ಹೆಜ್ಜೆ ಇಡಲಿ

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣೆಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಬಸವಣ್ಣನವರ ಮೂರ್ತಿಗಳಿಗಿಂತ ಅವರ ತತ್ವ ಆದರ್ಶಗಳು ಹೆಚ್ಚಾಗಲಿ

ಬಸವಣ್ಣನವರು ಈ ಜಗತ್ತು ಕಂಡ ಮಹಾ ಮಾನವತಾವಾದಿ, ದಾರ್ಶನಿಕ, ಭಕ್ತಿ ಬಂಢಾರಿ, ಆದರ್ಶ ಆಡಳಿತಗಾರ, ಸಮಾಜ ಸುಧಾರಕರು, ಸಾಮಾಜಿಕ ನ್ಯಾಯದ ಕ್ರಾಂತಿಕಾರಿ ಮತ್ತು ವಚನಕಾರರಾಗಿದ್ದಾರೆ. 12ನೇ ಶತಮಾನದಲ್ಲಿ ಬಸವಣ್ಣನವರು ಮಾಡಿದ ಸಮಾಜ ಸುಧಾರಣಾ ಕಾರ್ಯಗಳು ಮತ್ತು ಅವರ ಕ್ರಾಂತಿಕಾರಿ ವಿಚಾರಗಳು 21 ನೇ ಶತಮಾನದಲ್ಲಿ ಬಹಳ ಪ್ರಸ್ತುತ ಎನಿಸುತ್ತವೆ.

ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಡಿಪಾಯವನ್ನು ಬಸವಣ್ಣನವರು 12ನೇ ಶತಮಾನದಲ್ಲಿ 'ಅನುಭವ ಮಂಟಪ'ದ ಮೂಲಕವಾಗಿ ಯಾವುದೇ ಜಾತಿ, ಮತ, ಧರ್ಮ, ಮೇಲು ಕೀಳು ಎಂಬ ಭೇದ ಭಾವವಿಲ್ಲದೆ ಎಲ್ಲರೂ ಸೇರುತ್ತಿದ್ದರು. ಅಲ್ಲಿ ಶಿವ ಶರಣರು ಉತ್ತಮ ಸಮಾಜ ನಿರ್ಮಾಣ ಮಾಡುವ ಚರ್ಚೆಗಳನ್ನು ಮಾಡಿ, ಸಮಾಜಕ್ಕೆ ಮೌಲ್ಯಯುತವಾದ ಸಂದೇಶಗಳನ್ನು ನೀಡುತ್ತಿದ್ದರು. ಆ ಮೂಲಕವಾಗಿ ಸೌಹಾರ್ದಯುತ ಸಮಾಜ ನಿರ್ಮಾಣದಲ್ಲಿ ಬಸವಣ್ಣನವರು ಪ್ರಮುಖ ಪಾತ್ರವಹಿಸಿದರು.

ಬಸವಣ್ಣನವರು ತಮ್ಮ ಕಾಲಘಟ್ಟದಲ್ಲಿ ಕಂಡುಕೊಂಡ ತಪ್ಪು ತಡೆಗಳು, ಅಂಕು ಡೊಂಕುಗಳು ಮತ್ತು ಅಂಧಕಾರವನ್ನು ಹೋಗಲಾಡಿಸಲು ತಮ್ಮದೇ ಆದ ಹೊಸ ಶೈಲಿಯ ಜನಸಾಮಾನ್ಯರಿಗೆ ಅರ್ಥವಾಗುವಂತಹ ವಚನಗಳನ್ನು ರಚಿಸಿದರು. ಅವು ಸಾಮನ್ಯ ಜನರಿಗೂ ತಿಳಿಯವಂತಿದ್ದವು. ಹಾಗಾಗಿ, ಅವರು ವಚನ ಸಾಹಿತ್ಯದ ಮೂಲಕವಾಗಿ ಜನರ ಹೃದಯವನ್ನು ತಲುಪಿದರು.

ಅನುಭವ ಮಂಟಪದಲ್ಲಿ ಬಸವಣ್ಣನವರು ಯಾವುದೇ ಲಿಂಗ ಭೇದವಿಲ್ಲದೆ ಶರಣ ಶರಣೆಯರಿಗೆ ತಮ್ಮ ಅನುಭವಗಳು ಮತ್ತು ವಿಚಾರಗಳನ್ನು ಹಂಚಿಕೊಳ್ಳಲು ಅವಕಾಶ ಮಾಡಿಕೊಟ್ಟರು. ಅಂದಿನ ಮಡಿವಂತಿಕೆಯ ಸಮಾಜದಲ್ಲಿ ಸ್ತ್ರೀಯರಿಗೆ ಉತ್ತಮ ಸ್ಥಾನವನ್ನು ನೀಡಿದ್ದರು ಎಂಬುದನ್ನು ನಾವು ಸ್ಮರಿಸಬಹುದು. ಇವತ್ತಿಗೂ ರಾಜಕೀಯದಲ್ಲಿ ಮಹಿಳೆಯರು ಕಡಿಮೆ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ. ಏಕೆಂದರೆ, ಪುರುಷ ಪ್ರಧಾನ ಸಮಾಜದಲ್ಲಿಯ ಕಟ್ಟುಪಾಡುಗಳು ಮತ್ತು ನೀಯಮಗಳನ್ನು ದಾಟಿ ಸಮಾಜದ ಬದಲಾವಣೆಗಳಲ್ಲಿ ಕೈ ಜೋಡಿಸಬೇಕಾಗಿದೆ. ನಾವು ಮಕ್ಕಳಲ್ಲಿ ಚಿಕ್ಕಂದಿನಿಂದಲೇ ಹೆಣ್ಣು ಮತ್ತು ಗಂಡು ಎಂಬ ಭೇದಭಾವ ಮಾಡದೇ ಇದ್ದರೇ, ಅವರು ಸುಸಂಸ್ಕೃತ ಸಮಾಜ ನಿರ್ಮಾಣದಲ್ಲಿ ತೊಡಗಿಕೊಳ್ಳುತ್ತಾರೆ. ಅಣ್ಣನವರು ಸುಸಂಸ್ಕೃತ ಸಮಾಜದಲ್ಲಿ ಗಂಡು ಮತ್ತು ಹೆಣ್ಣು ಇಬ್ಬರೂ ಪ್ರಮುಖರು ಎಂದು ತಮ್ಮ ವಚನಗಳಲ್ಲಿ ತೋರಿಸಿಕೊಟ್ಟಿದ್ದಾರೆ.

ಬಸವಣ್ಣನವರು ಅಂದಿನ ಸಮಾಜದಲ್ಲಿನ ಜಾತಿ ವ್ಯವಸ್ಥೆಯನ್ನು ಧಿಕ್ಕರಿಸಿ, ಎಲ್ಲ ಸಮುದಾಯದ ಜನರನ್ನು ಒಳಗೊಳ್ಳುವ ಮಾನವೀಯ ನೆಲೆಗಟ್ಟಿನ ನೆಲೆಯಲ್ಲಿ 'ಲಿಂಗಾಯತ' ಪರಂಪರೆಯನ್ನು ಹುಟ್ಟು ಹಾಕಿದರು. ಆ ಪರಂಪರೆಯ ಶರಣ – ಶರಣೆಯರಿಗೆ ಲಿಂಗ(ಇಷ್ಟಲಿಂಗ) ಧಾರಣೆ ಮಾಡುವುದರ ಮೂಲಕವಾಗಿ ಯಾವುದೇ ಜಾತಿ ಮತ್ತು ಮತದ ವ್ಯಕ್ತಿಗಳು ಈ ಪರಂಪರೆಯನ್ನು ಸೇರಬಹುದಾಗಿತ್ತು. ಲಿಂಗ ಪೂಜೆಯ ಮುಖಾಂತರವಾಗಿ ಸಮಾಜದಲ್ಲಿ ಆಧ್ಯಾತ್ಮಿಕ ನೆಲೆಗಟ್ಟನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದರು.



12ನೇ ಶತಮಾನದಲ್ಲಿ ತಮ್ಮ ಸಮಾಜ ಸುಧಾರಿಸುವ ನಿಟ್ಟಿನಲ್ಲಿ ತಮ್ಮ 'ವಚನಗಳ' ಮೂಲಕ ಸಂದೇಶಗಳನ್ನು ರವಾನಿಸಿದರು. ಆ ಸಂದರ್ಭದಲ್ಲಿ ರಚನೆ ಮಾಡಿರುವ ವಚನಗಳು ಇವತ್ತು ಮತ್ತು ಮುಂದೆಯೂ ಸಮಾಜದಲ್ಲಿ ಆಧ್ಯಾತ್ಮಿಕ ಪರಂಪರೆಯನ್ನು ಮುನ್ನಡಿಸಿಕೊಂಡು ಹೋಗಬಲ್ಲವು. ಬಸವಣ್ಣನವರು ರಚಿಸಿರುವ ವಚನಗಳು ಹಲವಾರು ಭಾಷೆಯಗಳಲ್ಲಿ ಭಾಷಾಂತರವಾಗಿವೆ. ಅದರ ಮೂಲಕವಾಗಿ ಬಸವಣ್ಣನವರು ವಿಶ್ವಕ್ಕೆ ಪರಿಚಿತವಾಗಿದ್ದಾರೆ. 12ನೇ ಶತಮಾನದಲ್ಲಿ ಬಸವಣ್ಣನವರನ್ನು ಅಂದಿನ ಸಮಾಜ ಸ್ವೀಕರಿಸಲು ಪ್ರಮುಖ ಕಾರಣವೆಂದರೆ ಅವರು ನುಡಿದಂತೆ ನಡೆದ ಮಹಾನುಭಾವ. ಆ ಕಾರಣಕ್ಕಾಗಿ ಇವತ್ತಿಗೂ ಅವರ ಆಚಾರ, ವಿಚಾರ, ನಡೆ ಮತ್ತು ನುಡಿಗಳು ಪ್ರಸ್ತುತವಾಗಿವೆ. ಆದರೆ, ಇವತ್ತಿನ ಸಮಾಜಕ್ಕೆ ಬಸವಣ್ಣನವರು ಬೇಕು; ಅವರ ಆಚಾರ, ವಿಚಾರಗಳು ಅಷ್ಟು ಹೇಳಿಕೊಳ್ಳುವಷ್ಟು ಅಳವಡಿಸಿಕೊಳ್ಳುತ್ತಿಲ್ಲ. ಅವರ ಮೂರ್ತಿಗಳು ಹೆಚ್ಚಾಗುತ್ತಿವೆ, ಆದರೆ ಅವರ ತತ್ವ ಆದರ್ಶಗಳಲ್ಲ. ನಾವೆಲ್ಲರೂ ಮುಂದಿನ ಪೀಳಿಗೆಗೆ ಬಸವಣ್ಣನವರ ಆಧ್ಯಾತ್ಮಿಕ, ಶೈಕ್ಷಣಿಕ, ಸಾಮಾಜಿಕ ವಿಚಾರಗಳನ್ನು ಅಳವಡಿಸಿಕೊಂಡು, ಅಳವಡಿಸಲು ನಾವು ಪ್ರಯತ್ನ ಮಾಡೋಣ.

– **ನಿಂಗಪ್ಪ ಮಾಳಶೆಟ್ಟಿ,** ಕಾಜಿಬೀಳಗಿ, ಜಮಖಂಡಿ

# ನಾನು ನಾನೇ, ನಾನು ನಾನಾಗಿಯೇ ಇರುವೆ

ಅತ್ಯಂತ ಸುಂದರವಾದ ಈ ಕವಿತೆಯನ್ನು ಫೇಸ್ಬುಕ್ನ ಪುಟಗಳಲ್ಲಿ ಓದಿದ್ದು... ಹೌದಲ್ಲವೇ ಹೆಣ್ಣು ಮಕ್ಕಳು ಸೀತೆ ಸಾವಿತ್ರಿಯಂತಹ ಪತಿವ್ರತಾ ಸ್ತ್ರೀಯರಾಗಿ ರಬೇಕು ಎಂದು ಅನಾದಿಕಾಲ ದಿಂದಲೂ ಈ ಸಮಾಜ ಆಶಿಸುತ್ತದೆ.ಎಲ್ಲ ಕಷ್ಟ ನಿಷ್ಟುರಗಳನ್ನು ಸಹಿಸಿಕೊಂಡು ತನ್ನತನಕ್ಕಾಗಿ ದನಿಯೆತ್ತದ ಕುಟುಂಬದ ಒಳಿತಿಗಾಗಿ ತ್ಯಾಗವನ್ನು ಮಾಡುವ ಮತ್ತು ಅದನ್ನು ಸಮರ್ಥಿಸಿಕೊಳ್ಳುವ ಹೆಣ್ಣು ಮಕ್ಕಳು ನಮ್ಮ ನಿಮ್ಮ ನಡುವೆಯೇ ಇದ್ದಾರೆ. ಅವರಲ್ಲಿ ಅಕಸ್ಮಾತ್ ಯಾರಾದರೊಬ್ಬರು ವ್ಯವಸ್ಥೆಯ ವಿರುದ್ಧ ದನಿ ಎತ್ತಿದರೆ ಅವರನ್ನೇ ಖಳನಾಯಕರನ್ನಾಗಿ ಮಾಡುವ ಪುರುಷ ಪ್ರಧಾನ ಸಮಾಜದಲ್ಲಿ ಅವರಿಗೆ ಜೊತೆ ನೀಡುವ ಸೊ ಕಾಲ್ಡ್ ಗರತಿ ಗಂಗಮ್ಮನಂತಹ ಹೆಣ್ಣು ಮಕ್ಕಳು ಕೂಡ ಇದ್ದಾರೆ. ಹೆಣ್ತನದ ಎಲ್ಲಾ ರೀತಿ ನೀತಿಗಳನ್ನು ಅನುಸರಿಸಿಯೂ ತನ್ನ ಅಸ್ತಿತ್ವವನ್ನು ಉಳಿಸಿ ಕೊಳ್ಳಬಲ್ಲ ಮೋಳಿಗೆ ಮಹಾದೇವಿಯಂತಹ, ಬಸವಣ್ಣನವರ ಧರ್ಮಪತ್ನಿಯರಾದ ಗಂಗಾಂಬಿಕೆ ಮತ್ತು ನೀಲಾಂಬಿಕೆಯವರಂತಹ ದ್ರೌಪದಿಯಂತಹ ಹೆಣ್ಣು ಮಕ್ಕಳು ನಮಗೆ ಆದರ್ಶವಾಗಬೇಕು.

ನಾವು ಅವರಿವರಂತಾಗದೆ ನಮ್ಮತನವನ್ನು ಮೆರೆಯಬೇಕು ಎಂಬುದನ್ನು ಬಹಳ ಸುಂದರವಾಗಿ ನಿರೂಪಿಸಿರುವ ಹಿಂದಿಯ ಈ ಕವನವನ್ನು ಲಕ್ಷ್ಮಿಕಾಂತ್ ಪಾಂಡೆ ಕೃತಜ್ಞತಾಪೂರ್ವಕವಾಗಿ ಅರ್ಪಿಸಿದ್ದಾರೆ.

ಕೃಷ್ಣನ ಪ್ರೇಯಸಿಯಾದ ರಾಧೆ ರುಕ್ಮಿಣಿ ಸತ್ಯಭಾಮೆಯವರಿಗೆ ಮಗ್ಗುಲ ಮುಳ್ಳಿನಂತೆ ಭಾಸವಾದರೆ ತಪ್ಪಿಲ್ಲ. ತನ್ನ ಪವಿತ್ರತೆಯನ್ನು ಜಗತ್ತಿಗೆ ತಿಳಿಸಲು ಅಗ್ನಿಪರೀಕ್ಷೆ ಗೊಳಪಟ್ಟು ನಂತರವೂ ಅಗಸನ ಮಾತಿನಿಂದ ಪ್ರಭು ಶ್ರೀ ರಾಮನ ಅವಕೃಪೆಗೆ ಒಳಗಾಗಿ ತುಂಬು ಬಸಿರಿ ಸೀತೆ ಮತ್ತೊಮ್ಮೆ ವನವಾಸಿಯಾದಳು ಕೃಷ್ಣ ಭಕ್ತಿಯಲ್ಲಿ ಸಂಸಾರವನ್ನು ತೊರೆದು ಸನ್ಯಾಸಿಯಾದ ಸಂತ ಮೀರಾ ಪುರಜನರ ಅಪಹಾಸ್ಯಕ್ಕೀಡಾದಳು. ಜಗವೆಲ್ಲ ಮಲಗಿರಲು ತಾನೆದ್ದು ಹೊರ ನಡೆದ ಆತ ಪತ್ನಿ ಯಶೋಧರೆಗೆ ಒಂದು ಮಾತು ಹೇಳದೇ ಹೊರಟುಬಿಟ್ಟ. ಅಣ್ಣನ ಮೇಲಿನ ಭಕ್ತಿಗೆ ಆತನ ನೆರಳಾಗುವ ಭರದಲ್ಲಿ ತನ್ನನ್ನು ನಂಬಿ ಬಂದ ಪತ್ನಿ ಊರ್ಮಿಳೆಯನ್ನು ನೋಯಿಸಿದ, ಬೇಯಿಸಿದ ಪ್ರಭು ಶ್ರೀರಾಮಚಂದ್ರನ ಸೋದರ ಲಕ್ಷ್ಮಣ. ತನ್ನ ಗಂಡನಿಗೆ ಕಾಣದ ಈ ಲೋಕ ತನಗೂ ಬೇಡ ಎಂದು ಅವಸರದ ತೀರ್ಮಾನ ತೆಗೆದುಕೊಂಡ ಗಾಂಧಾರಿ ತನ್ನ ಮಕ್ಕಳನ್ನು ಒಳ್ಳೆಯ ನಾಗರಿಕರನ್ನಾಗಿಸುವಲ್ಲಿ ಸೋತು ಹೋದಳು.... ಮೇಲ್ಕಂಡ ಪತಿ ವ್ರತ ಸ್ತ್ರೀಯರಂತೆ ತಾನಾಗಲೊಲ್ಲೆ ಎಂದು ದಿಟ್ಟ ನಿಲುವನ್ನು ಪ್ರತಿಪಾದಿಸುವ ಈ ಕವನವನ್ನು ಭಾವನವಾದದ ಮೂಲಕ ನಿಮ್ಮ ಮುಂದೆ ಇಡುತ್ತೇನೆ

ನಾನು
ನಾನೇ,
ನಾನಾಗಿಯೇ ಇರುವೆ.

**ನಾನು ರಾಧೆಯಾಗಲೊಲ್ಲೆ**
**ನನ್ನ ಪ್ರೇಮ ಕಥೆಯಲ್ಲಿ**
**ಬೇರೆಯವರ ಪತಿ ಇದ್ದು,**
**ಸ್ವಾಮಿನಿಯ ಕಣ್ಣಿನ ಕಿರಿಕಿರಿ**
**ನಾನಾಗಲಾರೆ ,**
**ನಾನು ರಾಧೆಯಾಗಲೊಲ್ಲೆ**

**ನಾನು ಸೀತೆಯಾಗಲೊಲ್ಲೆ**
**ನಾನು ನನ್ನ ಪವಿತ್ರತೆಯ**
**ಪ್ರಮಾಣ ಪತ್ರ ನೀಡಲೊಲ್ಲೆ**
**ಅಗ್ನಿ ಪ್ರವೇಶ ಮಾಡಲೊಲ್ಲೆ**
**ಆತನೇಕೆ ನನ್ನನ್ನು ಬಿಟ್ಟುಬಿಡುವ**
**ನಾನೇ ಆತನನ್ನು ಬಿಟ್ಟು ಬಿಡುವೆ**
**ನಾನು ಸೀತೆಯಾಗಲೊಲ್ಲೆ**

**ನಾನು ಮೀರಳು ಆಗಲೊಲ್ಲೆ**
**ಯಾವುದೋ ಮೂರ್ತಿಯ ಮೋಹದಲ್ಲಿ**
**ಮನೆ ಮತ್ತು ಸಂಸಾರವನ್ನು ತೊರೆದು**
**ಸಾಧುಗಳ ಸಂಗದಲ್ಲಿ ತಿರುಗಲೊಲ್ಲೆ**
**ಕೈಯಲ್ಲಿ ಏಕತಾರಿಯ ಹಿಡಿದು**
**ಜವಾಬ್ದಾರಿಗಳ ಕೈ ಬಿಟ್ಟು**
**ನಾನು ಮೀರಾ ಆಗಲೊಲ್ಲೆ**
**ನಾ ಯಶೋಧರೆ ಆಗಲೊಲ್ಲೆ**
**ನನ್ನ ಬಿಟ್ಟು ಹೊರಟು ಹೋದ**
**ಕರ್ತವ್ಯಗಳನ್ನೆಲ್ಲ ತ್ಯಜಿಸಿ**
**ಖುದ್ದು ಭಗವಂತನಾದ**
**ಜ್ಞಾನವನ್ನೆಷ್ಟೇ ಪಡೆಯಲಿ**
**ಅಂತಹ ಪತಿಗಾಗಿ ನಾನು**
**ಪತಿವ್ರತೆಯಾಗಲೊಲ್ಲೆ**
**ನಾನು ಯಶೋಧರೆಯಾಗಲೊಲ್ಲೆ**

**ನಾನು ಊರ್ಮಿಳೆಯೂ ಆಗಲೊಲ್ಲೆ**
**ಪತ್ನಿಯ ಜೊತೆಗಾರಿಕೆಯ**
**ಅಭ್ಯಾಸವೂ ಇಲ್ಲದ**
**ಪತ್ನಿಯ ನೋವಿನ ಕಿಂಚಿತ್**
**ಅರಿವು ಇಲ್ಲದೆ**
**ತೊರೆದು ವರ್ಷಾನುಗಟ್ಟಲೆ**
**ಸಹೋದರನ ಜೊತೆಗೂಡಿದ**
**ವ್ಯಕ್ತಿಯ ನಾ ವರಿಸಲಾರೆ**
**ನಾನು ಊರ್ಮಿಳೆಯಾಗಲೊಲ್ಲೆ**

**ನಾ ಗಾಂಧಾರಿಯಾಗಲೊಲ್ಲೆ**
**ನೇತ್ರ ಹೀನ ಪತಿಯ ಕಣ್ಣಾಗುವೆ**
**ನನ್ನ ಕಣ್ಣ ಕಟ್ಟಿಕೊಂಡು**
**ಕತ್ತಲನ್ನು ಚುಂಬಿಸುವ**
**ಅರ್ಥಹೀನ ತ್ಯಾಗವ**
**ನಾ ಮಾಡಲೊಲ್ಲೆ**
**ನನ್ನ ಕಣ್ಣ ಮೂಲಕ ಅವ ನೋಡಲಿ**
**ಅಂತಹ ಪ್ರಯತ್ನ ಮಾಡುತ್ತಲೇ ಇರುವೆ**
**ನಾ ಗಾಂಧಾರಿಯಾಗಲೊಲ್ಲೆ**

**ಯಾರನ್ನು ಮನಸಾರೆ ವರಿಸುವೆನೋ**
**ನಾನು ಅಂತವನೊಂದಿಗೆ ಬದುಕುವೆ**
**ಆದರೆ ಆತನ ಅನ್ಯಾಯವ**
**ಎಂದೆಂದಿಗೂ ನಾ ಸಹಿಸಲಾರೆ**
**ಕರ್ತವ್ಯವೆಲ್ಲವ ನಿಭಾಯಿಸುವೆ**
**ಆದರೆ ಬಲಿದಾನದ ಹೆಸರಿನಲ್ಲಿ**
**ಯಾತನೆಯ ನಾ ಸಹಿಸಲೊಲ್ಲೆ**
**ನಾನು**
**ನಾನೇ**
**ನಾನು ನಾನಾಗಿಯೇ ಇರುವೆ**

ಸ್ನೇಹಿತರೆ ಹೆಚ್ಚು ವಿವರಣೆಗಳು ಬೇಕಿಲ್ಲ ಅಲ್ಲವೇ.

ಪುರುಷ ಪ್ರಧಾನ ವ್ಯವಸ್ಥೆಯ ನಮ್ಮ ದೇಶದಲ್ಲಿ ಅನಾದಿಕಾಲದಿಂದಲೂ ಹೆಣ್ಣನ್ನು ಹೀಗೆಯೇ ಇರಬೇಕು ಎಂದು ಕೆಲ ಚೌಕಟ್ಟುಗಳನ್ನು ಹಾಕಿ ಆಕೆಗೆ ಆರ್ಥಿಕ ಸಬಲೀಕರಣವಿಲ್ಲದಂತೆ ಮಾಡಿರುವ ನಮ್ಮ ಸಾಮಾಜಿಕ ವ್ಯವಸ್ಥೆ ಆಕೆ ಜೀವನ ಪರ್ಯಂತ ಪುರುಷನ ಅಡಿಯಾಳಾಗಿ ಬದುಕುವಂತೆ ಮಾಡಿದೆ. ಬೇರೆ ದಾರಿ ಇಲ್ಲದ ಹೆಣ್ಣು ಕೂಡ ಈ ವ್ಯವಸ್ಥೆಯನ್ನು ಒಪ್ಪಿ ಅಪ್ಪಿಕೊಂಡು ಬದುಕುತ್ತಿದ್ದಾಳೆ.ಆದರೆ ಆಕೆಗೂ ಒಂದು ಮನಸ್ಸಿದೆ, ಭಾವನೆಗಳಿವೆ, ವ್ಯಕ್ತಿತ್ವವಿದೆ ಅದಕ್ಕೆ ಧಕ್ಕೆಯಾದರೆ ಆಕೆ ಕೂಡ ಕೆರಳಬಹುದು ಎಂಬುದನ್ನು ಈ ಸಮಾಜ ಮರೆತಿದೆ.

ಮಹಿಳೆಯರನ್ನು ಒಂದು ವಸ್ತುವಿನಂತೆ ಕಾಣುವ ಈ ಸಮಾಜದಲ್ಲಿ ಆಕೆ ಏನಾದರೂ ಸಮಾನತೆಯ ಮಾತನಾಡಿದರೆ ತಮಾಷೆ ಮಾಡಿದಂತೆ ನಕ್ಕು ಬಿಡುತ್ತಾರೆ.ಸಮಾಜ ಹಾಕಿರುವ ಈ ಚೌಕಟ್ಟಿನಲ್ಲಿ ಹೇಳಿದಷ್ಟು ತಾನೇ ಬೆತ್ತಲಾಗುವ ಪರಿಸ್ಥಿತಿಯನ್ನು ಹೆಣ್ಣು ಮಕ್ಕಳು ಎದುರಿಸುತ್ತಿದ್ದಾರೆ ಅಷ್ಟಾಗಿಯೂ ಹೆಣ್ಣು ಮಕ್ಕಳು ವ್ಯವಸ್ಥೆಯ ವಿರುದ್ಧ ಸಾಮಾಜಿಕ ಅಸಮಾನತೆಗಳ ವಿರುದ್ಧ ಮಾತನಾಡಿದರೆ ಅವರ ಚಾರಿತ್ರ್ಯವನ್ನೇ ಹನನ ಮಾಡುವ ವ್ಯವಸ್ಥೆ ಇದ್ದು ನ್ಯಾಯಕ್ಕಾಗಿ ಹೋರಾಡುವ ಪ್ರತಿ ಹೆಣ್ಣು ಮಕ್ಕಳು ಹಿಂಜರಿಯುವಂತಹ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಅಂತಹ ಸಮಾಜದ ತಪ್ಪುಗಳನ್ನು ಎತ್ತಿ ತೋರಿಸಿ, ಸಾಮಾಜಿಕ ನಿಲುವುಗಳನ್ನು ಧಿಕ್ಕರಿಸಿ ಬರೆದಿರುವ ಈ ಕವನ ಹೆಣ್ಣು ಮಕ್ಕಳ ಯೋಚನಾಲಹರಿಯನ್ನು ಬದಲಾಯಿಸುವ ಶಕ್ತಿಯನ್ನು ಹೊಂದಿದೆ.ಆ ಅಜ್ಞಾತ ಕವಿಗೆ ನನ್ನ ನಮನಗಳು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

## ಕವಿ ಮನಸು

### ಬಸವೇಶಾ

ಕರವನು ಮುಗಿವೆನು
ಚರಣಕೆ ಎರಗುವೆ
ಹರಗುರು ಚರಗುರು
ಶ್ರೀ ಗುರು ಬಸವೇಶಾ

ಕರುಣಾ ಮೂರುತಿ
ಸದ್ಗುಣ ಕೀರುತಿ
ಉದ್ಧರಿಸಲು ಈ ಧರತಿ
ನೀನೆಂದು ಬರತೀ ಬಸವೇಶಾ

ಬಾಗೇವಾಡಿಲಿ ಜನಿಸಿದೆಯಾ
ಬಸವ ಕಲ್ಯಾಣದಿ ನೆಲೆಸಿದೆಯಾ
ಕಾಯಕವೇ ಕೈಲಾಸವೆನ್ನುವ
ಮಂತ್ರ ಸಾರಿದೆಯಾ

ಸರಾಳಾತಿ ಸರಳ ಭಾಷೆಯಲಿ
ವಚನಗಳ ನೀ ರಚಿಸಿದೆಯಾ
ಸಮಾನತೆ ಸಂದೇಶ ಸಾರಿದೆಯಾ
ವಿಶ್ವಕೆ ಗುರು ನಿನಾದೆಯ

ಬಸವನ ನೆನೆದೊಡೆ ದೆಸೆಗೆಟ್ಟು
ಹೋಗುವುದು ಪಾಪಗಳು
ಬಿಜ್ಜಳ ಮಹಾರಾಜ ಹೇಳಿದ
ನಿನಗೆ ಕೋಟಿ ನಮನಗಳು

ಜಾತಿ ಭೇದಗಳ ಮರೆ ಮಾಚಿಸಲು
ಪಣ ತೊಟ್ಟು ಹೋರಾಡಿದೆ
ಮಾನವ ಜಾತಿ ಒಂದೇ ಎನ್ನುವ
ಬೀಜ ಮಂತ್ರವಾ ನೀ ಸಾರಿದೆ

**– ಕೆ ಎಂ ಬಸವರಾಜ**
ಹೊಸಪೇಟೆ

### ಧ್ಯಾನ

ಚಿತ್ತ ಚಾಂಚಲ್ಯಕ್ಕೆ ಮದ್ದು ಈ ಧ್ಯಾನ
ಮನವು ಮಾಗಿರೆ ಸುಗಮವು ಈ ಯಾನ
ಅರಿವಾದರಿಲ್ಲಿ ನಮಗೆ ಆತ್ಮದ ಜ್ಞಾನ
ಬದುಕಿನಲಿ ಏರುವೆವು ಸುಖದ ಸೋಪಾನ

ಯೋಗದಲಿ ನಿಲ್ಲಿಸುವ ಹರಿದಾಡುವ
ಮನಸು
ಬದುಕೊಂದು ಕಣ್ತೆರೆದು ಕಾಣುವ ಕನಸು
ಭಕ್ತಿಯಲಿ ನೇಮದಲಿ ಭಗವಂತನನು
ಒಲಿಸು
ಹೃದಯದಲಿ ಆತನನು ಇಟ್ಟು ನೀ ಮೆರೆಸು

**~ ಚೇತನ ಭಾರ್ಗವ**
ಬೆಂಗಳೂರು

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ
ಭೇಟಿ ನೀಡಿ
www.hampitimes.com
epaper.hampitimes.com




# ಗೌರವ ಮತ್ತು ಪಾರದರ್ಶಕತೆಯನ್ನು ಬೆಳೆಸುವಲ್ಲಿ ಪೋಷಕರ ಪಾತ್ರ ಮತ್ತು ಶಿಕ್ಷಣ

ಮಾಜಿ ರಾಷ್ಟ್ರಪತಿ, ದೇಶ ಕಂಡ ಹೆಮ್ಮೆಯ ವಿಜ್ಞಾನಿ, ಮಿಸೈಲ್ ಮ್ಯಾನ್ ಎಂದೇ ಖ್ಯಾತರಾಗಿದ್ದ ಡಾ. ಅಬ್ದುಲ್ ಕಲಾಂ ರ ದೃಷ್ಠಿಕೋನವು ಹಲವಾರು ವಿಚಾರಗಳಲ್ಲಿ ನಮ್ಮನ್ನ ಚಕಿತರನ್ನಾಗಿ ಮಾಡುವುದಲ್ಲದೆ, ಯಾವತ್ತೂ ಒಂದು ಆಳವಾದ ಚಿಂತನೆಗೆ ಹಚ್ಚುವಂತೆ ಪ್ರೇರೇಪಿಸುವಲ್ಲಿ ಯಶಸ್ವಿಯಾಗುತ್ತಿದ್ದವು ಎನ್ನುವುದಕ್ಕೆ ಅವರ ಕೆಲವು ವಿಚಾರದಾರೆಗಳನ್ನು ಗಮನಿಸಬೇಕಾಗುತ್ತದೆ.

"ಯಾವುದೇ ಒಂದು ದೇಶವು ಭ್ರಷ್ಟಾಚಾರ ಮುಕ್ತವಾಗಬೇಕಾದರೆ ಮತ್ತು ಸುಂದರ ಮನಸ್ಸುಗಳುಳ್ಳ ಮಾನವ ಸಂಪನ್ಮೂಲವನ್ನು ಹೊಂದಿರುವ ರಾಷ್ಟ್ರವಾಗಬೇಕಾದರೆ, ನಮ್ಮ ಸಮಾಜಿಕ ವ್ಯವಸ್ಥೆಯಲ್ಲಿ ಪ್ರಮುಖವಾದಂತಹ ಮೂರು ಸಾಮಾಜಿಕ ಸದಸ್ಯರ ಸಂಪೂರ್ಣ ತೊಡಗಿಸಿಕೊಳ್ಳುವಿಕೆಯಿಂದ ಮಾತ್ರ ಅಂತಹ ಬದಲಾವಣೆಯನ್ನು ಕಾಣಬಹುದು ಎಂದು ನಾನು ಬಲವಾಗಿ ಭಾವಿಸುತ್ತೇನೆ. ಅವರೆಂದರೆ ತಂದೆ, ತಾಯಿ ಮತ್ತು ಶಿಕ್ಷಕ" (ಅಬ್ದುಲ್ ಕಲಾಂ).

ಈ ಮೇಲಿನ ಹೇಳಿಕೆಯಿಂದ ತಿಳಿದುಬರುವುದೇನಂದರೆ ಭ್ರಷ್ಟಾಚಾರವನ್ನು ಬೇರುಸಹಿತ ಕಿತ್ತೊಗೆಯಲು, ಸಮಾಜದ ಸದಸ್ಯರಲ್ಲಿ ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸಲು, ಸಾಮೂಹಿಕವಾಗಿ ಕೆಲಸ ಮಾಡಬೇಕಾದ ಪ್ರಮುಖ ಪಾತ್ರಗಳು ಯಾವುವು ಎಂಬುದನ್ನು ಇದು ಸ್ಪಷ್ಟವಾಗಿ ನಮಗೆ ತಿಳಿಸುತ್ತದೆ. ಹೌದು ಪ್ರಾಮಾಣಿಕತೆ ಮತ್ತು ಪಾರದರ್ಶಕತೆಗಳು ಉತ್ತಮ ಆಡಳಿತದ ಎರಡು ಪ್ರಮುಖ ಆದಾರ ಸ್ಥಂಬಗಳು ಇದ್ದಂತೆ ಮತ್ತು ಸಮಾಜದಲ್ಲಿ ಭ್ರಷ್ಟಾಚಾರದಂತಹ ಅವಕಾಶಗಳನ್ನು ಕಡಿಮೆ ಮಾಡಲು ಹಾಗು ಸರ್ಕಾರದ ಕಾರ್ಯವಿಧಾನಗಳನ್ನು ಸರಳೀಕರಿಸಲು ಇವು ಪ್ರಭಲ ಆಯುಧಗಳಂತೆ ಕಾರ್ಯನಿರ್ವಹಿಸುತ್ತವೆ ಎನ್ನುವುದರಲ್ಲಿ ಸಂಶಯವಿಲ್ಲ. ಹಾಗೆಯೆ ಇವು ಮೊದಲು ನನ್ನಿಂದ, ನಮ್ಮ ನಮ್ಮ ಮನೆಗಳಿಂದ ಮತ್ತು ಶಾಲಾ ಹಂತದಿಂದಲೇ ಪ್ರಾರಂಭವಾದರೆ ಮಾತ್ರ ಅತ್ಯಂತ ಯಶಸ್ವಿಯಾಗಿ ಸಾಧಿಸಬಹುದು.

ಹೌದು, ನಮ್ಮ ಇಂದಿನ ಅತೀ ಒತ್ತಡದ ಕೆಲಸದ ಸಂಸ್ಕೃತಿಯಲ್ಲಿ ಈ ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯನ್ನು ನಿರ್ಮಿಸುವಲ್ಲಿ ನಮ್ಮ ಮಕ್ಕಳ ಪಾಲನೆ, ಪೋಷಣೆ ಮತ್ತು ಅವರುಗಳ ಶಾಲಾ ಶಿಕ್ಷಣವು ಅತ್ಯಂತ ಪ್ರಮುಖ ಮತ್ತು ಅಂತಿಮ ಪಾತ್ರವನ್ನು ನಿರ್ವಹಿಸುವುದರ ಜೊತೆಗೆ ಅಪೇಕ್ಷಿತ ಪರಿಹಾರವನ್ನು ಪಡೆಯಲು ರಹದಾರಿಯಾಗಿವೆ ಎನ್ನುವುದನ್ನು ಮರೆಯಬಾರದು. ಏಕೆಂದರೆ ಪ್ರಸ್ತುತವಾಗಿ ನಾವು ಇಂತಹ ಒಂದು ಸಂದಿಗ್ಧ ಮತ್ತು ಸಂಕೀರ್ಣ ಪರಿಸ್ಥಿತಿಯಲ್ಲಿ ಇದ್ದೇವೆ. ಹಾಗೆಯೆ ನಮ್ಮ ಬಾಲ್ಯದ ಹಂತದಲ್ಲಿನ ನಮ್ಮ ಪಾಲನೆ, ಪೋಷಣೆ ಮತ್ತು ನಮ್ಮ ಶಾಲಾ ಶಿಕ್ಷಣವನ್ನು ಗಮನಿಸಿದಾಗ ನಮ್ಮ ಇತಿ ಮಿತಿಗಳು ಮತ್ತು ಬೇಕು ಬೇಡಗಳು ಅಗತ್ಯ ಮತ್ತು ಅನಿವಾರ್ಯತೆಗಳ ಪಟ್ಟಿ ಸಂಕ್ಷಿಪ್ತವಾಗಿದ್ದರಿಂದ ಇಂದು ನಾವು ಏನಾಗಿದ್ದೇವೆ ಎನ್ನುವುದು ನಮ್ಮ ಕಣ್ಣಮುಂದೆ ಇದೆ. ಆದರೆ ಪ್ರಸ್ತುತ ಸಮಾಜಿಕ ವ್ಯವಸ್ಥೆ ಮತ್ತು ಅದರ ಬೇಡಿಕೆಗಳು ಹಾಗು ಈ ಸಾಮಾಜಿಕ ವ್ಯವಸ್ಥೆಯಲ್ಲಿನ ಪಾಲ್ಗೊಳ್ಳುವಿಕೆಯ ಗುರಿ ಉದ್ದೇಶಗಳೆ ಬೇರೆಯಾಗಿವೆ ಮತ್ತು ಅದೆಲ್ಲರ ಪರಿಣಾಮದ ನೇರ ನೇರ ಉತ್ಪನ್ನವೇ ಈ ಸವಕಳಿಯುಕ್ತ ಸಣಕಲು ನ್ಯೂನತೆಯನ್ನು ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯಲ್ಲಿ ಕಾಣುತ್ತಿದ್ದೇವೆ.

ಸರಿ ಹಾಗಾದರೆ ಈ ಭ್ರಷ್ಟಾಚಾರದ ನಿರ್ಮೂಲನೆಯಲ್ಲಿ "ಪಾಲನೆ" ಎನ್ನುವುದರ ಪ್ರಾಮುಖ್ಯತೆಯನ್ನು ಅರ್ಥಮಾಡಿ ಕೊಳ್ಳಲು ಒಂದು ಗಾದೆಯನ್ನು ಅರ್ತೈಸುವ ಪ್ರಯತ್ನ ಮಾಡೋಣ ಒಂದು ಮಾತಿದೆ "ಒಬ್ಬ ವ್ಯಕ್ತಿಯ ಉತ್ತಮ ವ್ಯಕ್ತಿತ್ವದ ಚಿಹ್ನೆಗಳನ್ನು ಅವನ ಬಾಲ್ಯದಲ್ಲಿಯೇ ಕಾಣಬಹುದಾಗಿದೆ" ಎಂದು ಹೇಳುತ್ತದೆ. ಅಂದರೆ, "ಬೆಳೆಯುವ ಸಿರಿ ಮೊಳಕೆಯಲ್ಲಿ" ಎನ್ನುವ ಗಾದೆಯನ್ನು ನಾವೆಲ್ಲರು ಕೇಳಿದ್ದೇವೆ ಅಲ್ಲವೆ, ಇದರ ಅರ್ಥ ಇಷ್ಟೆ ಯಾವುದೇ ಒಂದು ಅಗತ್ಯ ಮತ್ತು ಸಾಮಾಜಿಕ ಸಾಮರಸ್ಯೆ, ಸಮುತ್ವದ ಹಿತಕ್ಕಾಗಿ ಪ್ರೇರಕವಾಗಬಲ್ಲಂತಹ ಅನಿವಾರ್ಯ ಗುಣಗಳನ್ನು ಬೆಳಸುವಲ್ಲಿ ಬಾಲ್ಯವು ಅತ್ಯಂತ ಸೂಕ್ತ ಸಮಯವಾಗಿರುತ್ತದೆ. ಹಾಗೆಯೇ ಪ್ರಾಮಾಣಿಕತೆ ಮತ್ತು ಪಾರದರ್ಶಕತೆಗಳಂತಹ ಗುಣಗಳು ಮುಂದಿನ ಪೀಳಿಗೆಗೆ ಪ್ರವಹಿಸಲೂ ಸಹ ಅಂದರೆ ವರ್ಗಾವಣೆಯಲ್ಲಿ ಬಾಲ್ಯವು ಬಹಳ ಪರಿಣಾಮಕಾರಿ ಪಾತ್ರವನ್ನು ವಹಿಸುತ್ತದೆ.

ಹಾಗಾಗಿ ಪೋಷಕರಾದ ನಾವು ಈ ಹಂತದಲ್ಲಿ ನಮ್ಮ ಮಕ್ಕಳ ಬಗ್ಗೆ ಅವರ ಬಾಲ್ಯದ ಬಗ್ಗೆ ಹೆಚ್ಚು ಕಾಳಜಿ



ವಹಿಸಬೇಕು, ಏಕೆಂದರೆ ನಾವು ಒಮ್ಮೆ ಈ ಹಂತದಲ್ಲಿ ಇಂತಹ ಸಮಿಷ್ಠಿ ಹಿತ ಕಾಯಿವ ಗುಣಗಳನ್ನು ಬೆಳೆಸುವಲ್ಲಿ ವಿಫಲರಾದರೆ, ಅವನ ಉಳಿದ ಜೀವನದಲ್ಲಿ ಮತ್ತಾವುದೇ ಹಂತದಲ್ಲಿ ಈ ಗುಣಗಳನ್ನು ಕಲಿಸಲು ಸಾಧ್ಯವಿಲ್ಲ.

ಉತ್ತಮ ಪೋಷಕರು ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯನ್ನು ಬೆಳಸುವಲ್ಲಿ ಮತ್ತು ಅವುಗಳನ್ನು ಮುಂದಿನ ಪೀಳಿಗೆಗೆ ವರ್ಗಾವಣೆ ಮಾಡಲು ಈ ಕೆಳಗಿನ ಅಂಶಗಳನ್ನು ಪಾಲಿಸಬೇಕಾಗುತ್ತದೆ.

**ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯನ್ನು ಬೆಳೆಸುವಲ್ಲಿ ಸಾಂಪ್ರದಾಯಿಕ ಮೌಲ್ಯವು ಮಹತ್ವಪೂರ್ಣವಾಗಿದೆ:**

ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯನ್ನು ಸಾಧ್ಯವಾದಷ್ಟು ಮನೆಯಿಂದಲೆ ಪ್ರಾರಂಭಿಸಬೇಕು. ಏಕೆಂದರೆ ಸಹಜವಾಗಿ ಮಾನವೀಯ ಮೌಲ್ಯಗಳಲ್ಲಿನ ಕೊರತೆಯು ಮಾನವ ಸಂಬಂಧಗಳ ನಡುವಿನ ನೈತಿಕ ಆರೋಗ್ಯ ಹದಗೆಡಲು ಪ್ರಮುಖ ಕಾರಣವಾಗಿದೆ. ಹಾಗಾಗಿ ಮನೆ ಮತ್ತು ಶಾಲೆಯಲ್ಲಿ ನೀಡುವಂತಹ ನೈತಿಕ ಶಿಕ್ಷಣದಲ್ಲಿ ಕೊರತೆಯನ್ನು ನೀಗಿಸುವುದು ಮತ್ತು ತಾಂತ್ರಿಕ ಶಿಕ್ಷಣಕ್ಕೆ ನೀಡುತ್ತಿರುವ ಹೆಚ್ಚಿನ ಪ್ರಾಮುಖ್ಯತೆಯನ್ನು ಮರು ವಿಮರ್ಶೆಗೊಳಪಡಿಸಬೇಕಾಗಿದೆ.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper

ಈ ಮಧ್ಯೆ ನಾವು ಶಿಕ್ಷಣದ ಮೂಲಭೂತ ಅಗತ್ಯಗಳನ್ನು ನಿರ್ಲಕ್ಷಿಸುತ್ತಿರುವುದು ಬಹುದೊಡ್ಡ ಸಮಸ್ಯೆಯಾಗಿದೆ. ಏಕೆಂದರೆ ಶಿಕ್ಷಣವು ನಮಗೆ ಕೌಶಲ್ಯಪೂರ್ಣ ಮಾನವ ಶಕ್ತಿಯನ್ನು ಉತ್ಪಾದಿಸಲು ಸಹಕಾರಿಯಾಗಬೇಕು. ನೈತಿಕ ಮೌಲ್ಯಗಳು, ಮಾನವ ಸಂಬಂಧ ಗಳನ್ನು ಅರ್ಥಮಾಡಿ ಕೊಳ್ಳಲು ಸಹಕಾರಿಯಾಗಬೇಕು, ಆದರೆ ಪ್ರಸ್ತುತ ಸನ್ನಿವೇಷದಲ್ಲಿ ಮನುಷ್ಯರು ಮನುಷ್ಯರೊಂದಿಗೆ ಸಂಬಂದವನ್ನು ದಿನೇ ದಿನೇ ಕಳಿದುಕೊಳ್ಳುತ್ತಾ ಯಾಂತ್ರಿಕ ಜಗತ್ತಿನಲ್ಲಿ ಯಂತ್ರಗಳೊಂದಿಗೆ ಕೆಲಸ ಮಾಡಲು ಸಮರ್ಥರಾಗಿದ್ದಾರೆ ಹೊರತು ಮಾನವೀಯ ಮೌಲ್ಯಗಳನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲವಾಗು ತ್ತಿದ್ದಾರೆ.

ಹಾಗಾಗಿ ಈ ಹಂತದಲ್ಲಿ ನಾವು ನೈತಿಕ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಬೇಕಾಗಿದೆ. ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯನ್ನು ಪಾಲಿಸುವುದರ ಜೊತೆ ಜೊತೆಗೆ ಅಂತಹ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ವರ್ಗಾವಣೆಯನ್ನು ಮಾಡುವ ಜವಾಬ್ದಾರಿಯನ್ನು ಪ್ರದರ್ಶಿಸಬೇಕಾಗಿದೆ. ನಾವು ನಮ್ಮ ಮಕ್ಕಳಲ್ಲಿ ಈ ರೀತಿಯ ಪ್ರಜ್ಞೆಯನ್ನು ಅವರ ಬಾಲ್ಯದಲ್ಲಿಯೇ ಜಾಗೃತಗೊಳಿಸ ಬೇಕಾಗಿದೆ, ಅದಕ್ಕೆ ಪೂರಕ ವಾತಾವರಣವನ್ನು ಸೃಷ್ಟಿಸಬೇಕು ತನ್ಮೂಲಕ ಕೌಟುಂಬಿಕ ಸಮಸ್ಯೆಗಳು ಮತ್ತು ಬೇಜವಾಬ್ದಾರಿ ಮನಸ್ಸುಗಳನ್ನು ಜಾಗೃತಗೊಳಿಸಿ ಇಂದಿನ ಅನೇಕ ಅವಿಭಕ್ತ ಕುಟುಂಬಗಳು ಆಧುನಿಕತೆಯಿಂದಾಗಿ ವಿಭಜಿಸುವುದನ್ನು ತಪ್ಪಿಸಬೇಕು. ಇದು ಕೇವಲ ಶಿಕ್ಷಣದಿಂದ ಮಾತ್ರ ಸಾಧ್ಯ ಅದು ಸಹ ನೈತಿಕ ತಳಹದಿಯನ್ನು ಹೊಂದಿರುವ ಸಾಂಪ್ರದಾಯಕ ಶಿಕ್ಷಣವಾಗಿದ್ದು ವೈಜ್ಞಾನಿಕ ಚೌಕಟ್ಟಿನಲ್ಲಿ ವಿಶ್ಲೇಷಣೆಗೊಳಪಡುವಂತಿರಬೇಕು.

ಒಂದು ವೇಳೆ ಸೂಕ್ತ ಸಮಯದಲ್ಲಿ ಯೋಗ್ಯ ಶಿಕ್ಷಣ ಸಿಗದೇ ಹೋದರೆ ಅಂತಹ ಶೈಕ್ಷಣಿಕ ವ್ಯವಸ್ಥೆಯಿಂದ ಹೊರಬಿದ್ದ ಉತ್ಪನ್ನವು ಅಂದರೆ ಮಕ್ಕಳು, ಕುಟುಂಬಗಳು ಅಥವಾ ಒಂದು ಜನಾಂಗವು ಯೋಗ್ಯ ಕೆಲಸವಿಲ್ಲದೆ ಫಲವನ್ನು ನಿರೀಕ್ಷಿಸಲು ಪ್ರಯತ್ನಿಸುತ್ತವೆ, ಅಗತ್ಯವಾದ ಸಂಪನ್ಮೂಲಗಳನ್ನು ಗಳಿಸದೆ ತಮ್ಮ ಜೀವನವನ್ನು ಆನಂದಿಸಲು ಪ್ರಯತ್ನಿಸುತ್ತಿವೆ. ಅಲ್ಲದೆ ಆ ಹಣವನ್ನು ಪಡೆಯಲು, ಅವರು ದರೋಡೆ, ಅಪಹರಣ ಮತ್ತು ಭ್ರಷ್ಟಾಚಾರದಂತಹ ಅನೈತಿಕ ಮತ್ತು ಸಮಾಜವಿರೋಧಿ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಹಾಗೆಯೆ ಅವರು ತಮ್ಮ ಮುಂದಿನ ಜನಾಂಗಕ್ಕೆ ಈ ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯನ್ನು ವರ್ಗಾವಣೆಮಾಡುವಲ್ಲಿ ವಿಫಲರಾಗುತ್ತಾರೆ.

ಈಗ ನಾವು ನಮ್ಮಲ್ಲಿ ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯನ್ನು ಬೆಳಸುವಲ್ಲಿ ಅವುಗಳನ್ನು ಮುಂದಿನಿ ಪೀಳಿಗೆಗೆ ವರ್ಗಾವಣೆಯನ್ನು ಮಾಡುವಲ್ಲಿ, ಬೆಳೆಸಲು ಸಹಾಯ ಮಾಡುವ ಪ್ರಮುಖ ಅಂಶವೆಂದರೆ ಅದು ಶಾಲೆ.

**ಹಾಗಾದರೆ ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯನ್ನು ಹೇಗೆ ಸಾಧಿಸಬಹುದು / ಅಭಿವೃದ್ಧಿಪಡಿಸಬಹುದು ಎಂಬುದನ್ನು ಚರ್ಚಿಸೋಣ:**

ಮಕ್ಕಳ ಉತ್ತಮ ಪಾಲನೆಯು ಅವರಲ್ಲಿ ಪ್ರಾಮಾಣಿಕತೆಯನ್ನು ಬೆಳೆಸುವಲ್ಲಿ ಮತ್ತು ಮುಂದಿನ ಪೀಳಿಗೆಯಲ್ಲಿ ಅದರ ಫಲ ಮತ್ತು ಧನಾತ್ಮಕ ಪರಿಣಾಮವನ್ನು ವರ್ಗಾವಣೆ ಮಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆಯೋ ಹಾಗೆಯೇ ಶಾಲಾ ಶಿಕ್ಷಣವೂ ಸಹ ನಮ್ಮ ಮಕ್ಕಳನ್ನು ನಮ್ಮ ದೇಶದ ಭವಿಷ್ಯದ ಪ್ರಜೆಗಳು ಎಂದೇ ಭಾವಿಸಿ ಮತ್ತವರ ಸೋಕ್ಷ್ಮ ಸಂವೇದನಾ ಶೀಲತೆಯನ್ನು ಗಮನಿಸಿ ಅದಕ್ಕೆ ಪೂರಕ ಮತ್ತು ಪ್ರೇರಕ ವಾತಾವರಣವನ್ನು ಸೃಷ್ಠಿಸಿ ಅವರಲ್ಲಿ ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯನ್ನು ಬೆಳಸಲು ಪ್ರಯತ್ನಿಸುತ್ತದೆ.

ನಮ್ಮ ಶಾಲೆಗಳಲ್ಲಿ ಭಾರತದ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೂಲಭೂತ ಅಂಶಗಳನ್ನು ಜೊತೆ ಜೊತೆಗೆ ಅವರಿಗೆ ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯನ್ನು ಹೇಗೆ ಸಾಧಿಸಬಹುದು ಎಂಬುವುದರ ಬಗ್ಗೆ ವಿಶೇಷವಾದ ಒತ್ತು ನೀಡುವಂತಹ ಶಿಕ್ಷಣದ ಅವಶ್ಯಕತೆ ನಮ್ಮದಾಗಬೇಕು, ಅಂತಹ ಶಿಕ್ಷಣ ದೇಶದ ಆರೋಗ್ಯಯುತ ಸಾಮಾಜಿಕ ಬೆಳವಣಿಗೆಗೆ ಸಹಾಯ ಮಾಡುತ್ತದೆ. ಶಾಲೆಗಳು ಈ ಉದಾತ್ತ ವಿಚಾರಕ್ಕೆ ಸಂಬಂದಿಸಿದ ಪಾತ್ರಗಳನ್ನು ಸೃಷ್ಠಿಸಿ ಮೇಲಿನ ಮೌಲ್ಯಗಳನ್ನು ಸಾಧಿಸಲು ಸಾಕಷ್ಟು ಅವಕಾಶಗಳಿವೆ.

**ಇನ್ನು ನೈತಿಕ ಶಿಕ್ಷಣದ ಪ್ರಾಮುಖ್ಯತೆ ಪ್ರಾಮುಖ್ಯತೆಯನ್ನು ಮನಗಾಣವುದಾದರೆ:**

ನಮ್ಮ ಪ್ರಸ್ತುತ ಶಿಕ್ಷಣ ವ್ಯವಸ್ಥೆ ಮತ್ತು ನಮ್ಮ ಪಠ್ಯಕ್ರಮವು ಕೇವಲ ಯಾಂತ್ರಿಕತೆಗೆ ಒತ್ತು ನೀಡುವ ಕೇವಲ ಉತ್ಪಾದನೆಯನ್ನು ಆಧಾರಿತ ಅದಕ್ಕೆ ಪೋರಕವಾಗುವಂತಹ ಮಾನವ ಸಂಪನ್ಮೂಲವನ್ನು ಸೃಷ್ಟಿಸಲು ಸೂಕ್ತವಾಗಿದೆ ಎಂದು ಅನ್ನಿಸುತ್ತಿಲ್ಲವೆ?. ಉತ್ಪಾದಕತೆಯ ಜೊತೆ ಜೊತೆಗೆ ವ್ಯವಹಾರಿಕ, ಸಾಮಾಜಿಕ, ಸಾಂಸ್ಕೃಕ ಸಾಮರಸ್ಯದ, ಸರ್ವರ ಹಿತ ಕಾಯುವ, ನೈತಿಕ ನೆಲೆಗಟ್ಟಿನಲ್ಲಿ ವೈಜ್ಞಾನಿಕ ದೃಷ್ಠಿಕೋನವನ್ನು ಹೊಂದಿರುವ ಶಿಕ್ಷಣದ ಅನಿವಾರ್ಯತೆ ನಮಗಿದೆ ಎನ್ನಿಸುವುದಿಲ್ಲವೆ? ನಾವು ನಮ್ಮ ಪಠ್ಯಕ್ರಮವನ್ನು ಬದಲಾಯಿಸಬೇಕಾದ ಅನಿವಾರ್ಯತೆ ಇದೆ, ನಮ್ಮ ಪಠ್ಯಕ್ರಮವನ್ನು ನೈತಿಕತೆಯ ಆಧಾರದ ಮೇಲೆ ನಿರ್ಮಿಸಬೇಕು ಮತ್ತು ಉತ್ಪಾಧಕತೆಯ ಜೊತೆಗೆ ಪಠ್ಯಕ್ರಮದಲ್ಲಿ ನೈತಿಕ ಶಿಕ್ಷಣ, ದೈಹಿಕ ಶಿಕ್ಷಣ, ಉಪಯುಕ್ತ ಉತ್ಪಾಧನ ಕಾರ್ಯ ಶಿಕ್ಷಣವನ್ನು ಅಳವಡಿಸಿ. ಮಗು ಅಥವಾ ಒಬ್ಬ ವ್ಯಕ್ತಿ ಸ್ವಯಂ ಪ್ರಾಮಾಣಿಕತೆ ಮತ್ತು ಪ್ರಾಮಾಣಿಕತೆಯ ಚಿಂತನೆಯನ್ನು ಮಾಡುವಂತಾಗಬೇಕು. ನಮ್ಮ ಮಕ್ಕಳ ಮನಸ್ಸಿನಲ್ಲಿ ಒಮ್ಮೆ ಇಂತಹ ಮೌಲ್ಯಯುಕ್ತ ಗುಣಗಳುನ್ನು ಬಿತ್ತಿದರೆ ಅದು ನಮ್ಮ ಮಕ್ಕಳ ವ್ಯಕ್ತಿತ್ವದಲ್ಲಿ ಅಂತಿಮವಾಗಿ ಮಗುವಿನ ಮನಸ್ಸು ಮತ್ತು ಹೃದಯವನ್ನು ಅರಳಿಸಲು ಕಾರಣ ಮತ್ತು ಕಾರಕವಾಗುವುದರಲ್ಲಿ ಎರಡು ಮಾತಿಲ್ಲ.

ನಮ್ಮ ಮಕ್ಕಳಲ್ಲಿ ಸಮಗ್ರತೆಯನ್ನು ಹೆಚ್ಚಿಸುವಂತಹ ಚಟುವಟಿಕೆಗಳನ್ನು ಶಾಲಾ ವಾತಾವರಣದಲ್ಲಿ ಅನುಸರಿಸರಿಸಬೇಕು. ಉದಾ: ವಿದ್ಯಾರ್ಥಿ ಸಂಸತ್ತಿನ ರಚನೆ, ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯನ್ನು ಹೇಗೆ ಅಭಿವೃದ್ಧಿಪಡಿಸುವುದು ಎಂಬುದರ ಕುರಿತು ಕಾರ್ಯಾಗಾರ, ಚರ್ಚೆಗಳು, ವಿದ್ಯಾರ್ಥಿ ನ್ಯಾಯಾಲಯಗಳು,

ಶಾಲೆಯಲ್ಲಿ ರಾಷ್ಟ್ರೀಯತೆಯ ಮಹತ್ವದ ಅರಿವು ಉಂಟುಮಾಡುವುದು ಬಹು ಮುಖ್ಯವಾಗಿದೆ, ಏಕೆಂದರೆ ರಾಷ್ಟ್ರೀಯತೆ ಎನ್ನುವುದು ನಮ್ಮನ್ನು ಒಂದು ಉತ್ತಮ ಕಾರ್ಯಕ್ಕೆ ಪ್ರೇರೇಪಿಸುವ ಕೇವಲ ಒಂದು ಪದವಾಗಿರದೆ ಅದೊಂದು ಮಹತ್ವದ ನಮ್ಮೆಲ್ಲರ ಅಸ್ಮಿತೆಯಾಗಿದೆ ಮತ್ತು ನಮ್ಮ ಶ್ರೇಷ್ಠ ಇತಿಹಾಸ ಮತ್ತು ನಮ್ಮ ಪೂರ್ವಜರ ಶ್ರೇಷ್ಠ ಸಾಧನೆಗಳನ್ನು ಅಧ್ಯಯನಕ್ಕೆ ಪ್ರೇರೇಪಿಸುತ್ತದೆ. ಉದಾ: ನಾವು ಆಚರಿಸುವ ರಾಷ್ಟ್ರೀಯ ಹಬ್ಬಗಳು, ಕ್ರೀಡೆಗಳು ಇತ್ಯಾದಿಗಳು ಈ ಅಂಶವನ್ನು ಜಾಗೃತಗೊಳಿಸಲು ಸಹಕರಿಸುತ್ತವೆ.

ರಾಷ್ಟ್ರೀಯ ಹಬ್ಬಗಳ ಜೊತೆಗೆ ನಾವು ನಮ್ಮ ವಿದ್ಯಾರ್ಥಿಗಳನ್ನು ಈ ರೀತಿ ಭಾಗವಹಿಸಲು ಪ್ರೇರೇಪಿಸಬೇಕು– ರಾಷ್ಟ್ರಗೀತೆ ಹಾಡುವುದು ರಾಷ್ಟ್ರಕ್ಕಾಗಿ ಕ್ರೀಡೆಗಳನ್ನು ನಡೆಸುವುದು ಸಾಂಸ್ಕೃತಿಕ ಚಟುವಟಿಕೆಗಳು ಸಹ–ಶಿಕ್ಷಣ ಓಖಖ ಮತ್ತು ಓಅಅ ಗೆ ಸೇರುವುದು ಪ್ರತಿಜ್ಞೆ ತೆಗೆದುಕೊಳ್ಳುವ ಮೂಲಕ ನಮ್ಮ ಮಕ್ಕಳಲ್ಲಿ ಇವುಗಳು ಬಗ್ಗೆ ಹೆಮ್ಮೆಯ ಭಾವನೆಯನ್ನುಂಟುಮಾಡುತ್ತವೆ ಮತ್ತು ಸಾರ್ವಜನಿಕವಾಗಿ ಭಾಗವಹಿಸಲು ಮತ್ತು ನಮ್ಮಲ್ಲಿ ಸಮಗ್ರತೆಯನ್ನು ಹೆಚ್ಚಿಸಲು ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ಪ್ರಾಮಾಣಿಕತೆ ಮತ್ತು ಪಾರದರ್ಶಕತೆ ಬೆಳಸುವಲ್ಲಿ, ಗೌರವಯುತ ಜೀವನವನ್ನು ಹೊಂದಲು, ನಮ್ಮ ಮಕ್ಕಳ ಉತ್ತಮವಾದ ಪಾಲನೆ ಮತ್ತು ಪೋಷಣೆಗಳು ಹಾಗೆ ನೈತಿಕ ಶಿಕ್ಷಣ ತಳಹದಿಯ ಉತ್ಪಾದಕ ಶಿಕ್ಷಣವು, ವೈಜ್ಞಾನಿಕ ಮನೋಭಾವನೆಯನ್ನು ಪ್ರೇರೇಪಿಸುವಂತಹ ವಿಶಾಲ ದೃಷ್ಟಿಕೋನದ ಶಿಕ್ಷಣವು ಪ್ರಮುಖ ಪಾತ್ರವನ್ನು ವಹಿಸುತ್ತದೆ ಎನ್ನುವುದು ಮನದಟ್ಟಾಗುತ್ತದೆ.

# ಪತ್ರಿಕೋದ್ಯಮ ಪ್ರಶಸ್ತಿ ಪ್ರಕಟ

**ಮೊದಲ ಪುಟದಿಂದ**

ಪ್ರಶಸ್ತಿ'ಯನ್ನು ಕರ್ನಾಟಕ ಸರ್ಕಾರವು 2010ರಿಂದ ಪ್ರತಿ ವರ್ಷ ನೀಡುತ್ತಿದೆ. ಈ ಪ್ರಶಸ್ತಿಯು 2 ಲಕ್ಷ ರೂ. ನಗದು ಪುರಸ್ಕಾರವನ್ನು ಒಳಗೊಂಡಿದೆ.

ಈ ವರೆಗೆ 09 ಪತ್ರಕರ್ತರು ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ. 2019 ರಿಂದ 2023 ರವರೆಗಿನ 5 ವರ್ಷಗಳ ಅವಧಿಯ ಪ್ರಶಸ್ತಿಗಳನ್ನು ಇದೀಗ ಸರ್ಕಾರ ಪ್ರಕಟಿಸಿದೆ. 2019ನೇ ಸಾಲಿಗೆ ರಾಜೀವ್ ಕಿದಿಯೂರ, 2020ನೇ ಸಾಲಿಗೆ ಇಂದೂಧರ ಹೊನ್ನಾಪುರ, 2021ನೇ ಸಾಲಿಗೆ ಎನ್.ಮಂಜುನಾಥ, 2022ನೇ ಸಾಲಿಗೆ ಚಂದ್ರಶೇಖರ್ ಪಾಲೆತ್ತಾಡಿ, 2023ನೇ ಸಾಲಿಗೆ ಶಿವಲಿಂಗಪ್ಪ ದೊಡ್ಡಮನಿ ಅವರಿಗೆ ಪ್ರಶಸ್ತಿ ನೀಡಲಾಗಿದೆ.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ಅಧ್ಯಕ್ಷತೆಯ ರಚಿತವಾದ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಹಿರಿಯ ಪತ್ರಕರ್ತರಾದ ಡಾ.ಈಶ್ವರ ದೈತೋಟ, ಶಾಂತಲಾ ಧರ್ಮರಾಜ್, ಎಂ.ಎಸ್. ಮಣಿ ಹಾಗೂ ಸದಸ್ಯ ಕಾರ್ಯದರ್ಶಿಗಳಾದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಹೇಮಂತ್ ಎಂ.ನಿಂಬಾಳ್ಕರ್ ಅವರಿದ್ದರು. ಈ ಸಮಿತಿಯ ಶಿಫಾರಸ್ಸುಗಳನ್ನು ಸರಕಾರ ಅನುಮೋದಿಸಿ ಪ್ರಶಸ್ತಿ ಘೋಷಿಸಿದೆ. ಕೋವಿಡ್ ಸೇರಿ ನಾನಾ ಕಾರಣಗಳಿಂದ ವಿಳಂಬವಾಗಿದ್ದ 2019 ರಿಂದ 2023ನೇ ಸಾಲಿನ ಒಟ್ಟು 5 ವರ್ಷಗಳ ಅವಧಿಯ ಪ್ರಶಸ್ತಿಗಳನ್ನು ಘೋಷಿಸಲಾಗಿದೆ. ಈ ಪ್ರಶಸ್ತಿ ವಿಜೇತರಿಗೆ ಪ್ರಶಸ್ತಿ ಪ್ರದಾನ ಸಮಾರಂಭ ವನ್ನು ಶೀಘ್ರದಲ್ಲಿ ಹಮ್ಮಿಕೊಳ್ಳಲಾಗುವುದು ಎಂದು ಇಲಾಖೆಯ ಆಯುಕ್ತರಾದ ಹೇಮಂತ್ ಎಂ.ನಿಂಬಾಳ್ಕರ್ ತಿಳಿಸಿದ್ದಾರೆ.

# ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಹುದ್ದೆ: ಮಧ್ಯವರ್ತಿಗಳ ಆಮಿಷಕ್ಕೆ ಒಳಗಾಗದಿರಿ

## ಶಿಶು ಅಭಿವೃದ್ಧಿ ಯೋಜನಾದಿಕಾರಿ ಹೇಳಿಕೆ

**ಹಂಪಿ ಟೈಮ್ಸ್ ಹೊಸಪೇಟೆ**

ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ನೇಮಕಾತಿ ವಿಚಾರದಲ್ಲಿ ಮದ್ಯವರ್ತಿಗಳಿಗೆ ಹಣ ನೀಡಿ ಮೋಸ ಹೋಗಬಾರದು ಎಂದು ಹೊಸಪೇಟೆ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾದಿಕಾರಿಗಳು ತಿಳಿಸಿದ್ದಾರೆ.

ಹೊಸಪೇಟೆ ತಾಲೂಕಿನಲ್ಲಿ ಖಾಲಿ ಇದ್ದ, ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಹುದ್ದೆಗೆ ಈ ಹಿಂದೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿತ್ತು, ನೇಮಕಾತಿಯ ವಿಚಾರದಲ್ಲಿ ಮಧ್ಯವರ್ತಿಗಳು ಹಾಗೂ ಕೆಲವು ಸಂಘಟನೆಯ ಹೆಸರುಗಳನ್ನು ಬಳಸಿಕೊಂಡು ಸಾರ್ವಜನಿಕರಲ್ಲಿ ನೇಮಕಾತಿ ಮಾಡಿಕೊಡುತ್ತೇವೆ ಎಂದು ಹಣ ವಸೂಲಿ ಮಾಡುತ್ತಿರುವುದು ಮತ್ತು ಅಧಿಕಾರಿಗಳಲ್ಲಿ ಹಣದ ಆಮಿಷ ತೋರಿಸಿ ನೇಮಕಾತಿ ಮಾಡುವಂತೆ ಮಧ್ಯವರ್ತಿಗಳು ನೇಮಕಾತಿಯ ಪ್ರಕ್ರಿಯೇಯಲ್ಲಿ ಭಾಗವಹಿಸುತ್ತಿದ್ದಾರೆ ಎಂದು ಕೇಳಿ ಬರುತ್ತಿದೆ.

ನೇಮಕಾತಿ ಪ್ರಕ್ರಿಯೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಪರಿಶೀಲಿಸಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನೇಮಕಾತಿ ಮಾಡಲಾಗುವುದು. ನೇಮಕಾತಿಯು ಸಂಪೂರ್ಣವಾದ ಪಾರದರ್ಶಕತೆಯಿಂದ ಕೂಡಿರುತ್ತದೆ. ಹಾಗಾಗಿ ಸಾರ್ವಜನಿಕರು ಯಾವುದೇ ಮೋಸದ ಜಾಲಕ್ಕೆ ಒಳಗಾಗ ಬಾರದು ಎಂದು ಪ್ರಕಟಣೆ ತಿಳಿಸಿದೆ.

ಹಂಪಿ ಟೈಮ್ಸ್
HAMPI TIMES

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಭಾದ್ರಪದ । ಸಂವತ್ಸರ: ಕ್ರೋಧಿ

**22–09–2024 – ಭಾನುವಾರ**

| | |
|---|---|
| ತಿಥಿ | : ಪಂಚಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಕೃತಿಕಾ |
| ಯೋಗ | : ಹರ್ಷಣಾ |
| ಕರಣ | : ವಜ್ರ |
| ಸೂರ್ಯೋದಯ | : 06:16:47 |
| ಸೂರ್ಯಾಸ್ತ | : 18:21:52 |
| ರಾಹು ಕಾಲ | : 16:51–18:22 |
| ಯಮಘಂಡ ಕಾಲ | : 12:19–13:50 |
| ಗುಳಿಕ ಕಾಲ | : 15:21–16:51 |

## ತುಂಗಭದ್ರಾ ನೀರಿನ ಮಟ್ಟ



ಶನಿವಾರ : 21–09–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1632.00 ಅಡಿ |
| ಒಳ ಹರಿವು | 10742 ಕ್ಯುಸೆಕ್ |
| ಹೊರ ಹರಿವು | 10142 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.773 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1620.43 ಅಡಿ |
| ಒಳ ಹರಿವು | 6065 ಕ್ಯುಸೆಕ್ |
| ಹೊರ ಹರಿವು | 9964 ಕ್ಯುಸೆಕ್ |
| ಸಾಮರ್ಥ್ಯ | 62.544 ಟಿಎಂಸಿ |

# ಕಾರ್ಮಿಕರಿಗೆ ಕಾನೂನುಗಳ ಜ್ಞಾನವಿರಲಿ

### ಕಾರ್ಮಿಕ ಕಾಯ್ದೆಗಳ ಸಮಗ್ರ ಚರ್ಚೆ । ಜಿಲ್ಲಾಮಟ್ಟದ ವಿಶೇಷ ಕಾರ್ಯಾಗಾರದಲ್ಲಿ ಸುಧಾ ಗರಗ ಹೇಳಿಕೆ



■ **ಹಂಪಿ ಟೈಮ್ಸ್ ಕೊಪ್ಪಳ**

ಕಾರ್ಮಿಕ ಸಚಿವರ ನಿರ್ದೇಶನದಂತೆ ಕೊಪ್ಪಳ ಜಿಲ್ಲೆಯ ಉದ್ಯೋಗದಾತರಿಗೆ, ಹೊರಗುತ್ತಿಗೆ ಗುತ್ತಿಗೆದಾರರಿಗೆ, ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕ ಸಂಘಟನೆಗಳ ಪದಾಧಿಕಾರಿಗಳಿಗೆ ಹಾಗೂ ಕಾರ್ಮಿಕರಿಗೆ ಕಾರ್ಮಿಕ ಇಲಾಖೆಯಿಂದ ಅನುಷ್ಠಾನಗೊಳಿ ಸುತ್ತಿರುವ ಕಾನೂನುಗಳು ಮತ್ತು ಯೋಜನೆಗಳ ಕುರಿತು ಜಿಲಾಮಟ್ಟದ ಕಾರ್ಯಾಗಾರವು ಶುಕ್ರವಾರ ನಡೆಯಿತು.

ಜಿಲ್ಲಾ ಕಾರ್ಮಿಕ ಅಧಿಕಾರಿ ಸುಧಾ ಗರಗ ಅವರು ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆ ಕಾಯ್ದೆ 1961, ಕನಿಷ್ಠ ವೇತನ ಕಾಯ್ದೆ 1948, ವೇತನ ಪಾವತಿ ಕಾಯ್ದೆ 1936, ಸಮಾನ ವೇತನ ಪಾವತಿ ಕಾಯ್ದೆ 1976, ಉಪಧನ ಪಾವತಿ ಕಾಯ್ದೆ 1972, ಹೆರಿಗೆ ಭತ್ಯೆ ಕಾಯ್ದೆ 1961 ಹಾಗೂ ಬಾಲಕಾರ್ಮಿಕ ಕಾಯ್ದೆ ಮತ್ತು ಬೋನಸ್ ಪಾವತಿ ಕಾಯ್ದೆ 1965 ಬಗ್ಗೆ ಪ್ರತಿಯೊಬ್ಬರು ಅರಿಯಬೇಕು. ಈ ಕಾರ್ಮಿಕ ಕಾಯ್ದೆಗಳ ಬಗ್ಗೆ ನಮಗೆ ಜ್ಞಾನವಿದ್ದಲ್ಲಿ ಆಪತ್ಕಾಲದಲ್ಲಿ ಸಾಕಷ್ಟು ಸಹಾಯಕ್ಕೆ ಬರಲಿವೆ ಎಂದು ಸಲಹೆ ಮಾಡಿದರು.

ಅಂಬೇಡ್ಕರ ಸಹಾಯಹಸ್ತ ಯೋಜನೆಯಡಿ 6,594 ಜನ ಫಲಾನುಭವಿಗಳು, ಇ–ಶ್ರಮ್ ಯೋಜನೆಯಡಿ 2,49,607 ಫಲಾನುಭವಿಗಳು ನೋಂದಣಿ ಮಾಡಿದ್ದಾರೆ. ಇದರಲ್ಲಿ ಒಬ್ಬ ಫಲಾನುಭವಿಯು ಒಟ್ಟು 2 ಲಕ್ಷ ರೂ.ಗಳನ್ನು ಅಪಘಾತ ಪರಿಹಾರ ಸೌಲಭ್ಯ ಪಡೆಯುತ್ತಾರೆ. ಖಾಸಗಿ ವಾಣಿಜ್ಯ ವಾಹನ ಚಾಲಕರು, ನಿರ್ವಾಹಕರು, ಕ್ಲೀನರ್‌ಗಳ ಸೇರಿ 33 ಜನ ಫಲಾನುಭವಿಗಳು ನೋಂದಣಿ ಮಾಡಿರುತ್ತಾರೆ. ಅಪಘಾತ ಪರಿಹಾರವಾಗಿ 5 ಜನ ಫಲಾನುಭವಿಗಳು 5 ಲಕ್ಷ ರೂ.ಸೌಲಭ್ಯ ಪಡೆದಿರುತ್ತಾರೆ. ಗಿಗ್ ಕಾರ್ಮಿಕರು 101 ಜನ ನೋಂದಣಿಯಾಗಿರುತ್ತಾರೆ ಎಂದು ತಿಳಿಸಿದರು.

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಸಂಬಂಧಿಸಿದಂತೆ ಕೊಪ್ಪಳ ಜಿಲ್ಲೆಯಲ್ಲಿ 2,02,513 ಜನ ಫಲಾನುಭವಿಗಳು ನೋಂದಣಿಯಾಗಿರುತ್ತಾರೆ. ಮದುವೆ ಧನಸಹಾಯಕ್ಕೆ 6226 ಜನ ಫಲಾನುಭವಿಗಳು, ಸಾಮಾನ್ಯ ವೈದ್ಯಕೀಯ ಸೌಲಭ್ಯಕ್ಕೆ 13 ಜನ ಫಲಾನುಭವಿಗಳು, ಪ್ರಮುಖ ವೈದ್ಯಕೀಯ ಧನಸಹಾಯಕ್ಕೆ 285 ಜನ ಫಲಾನುಭವಿಗಳು, ಹೆರಿಗೆ ಧನಸಹಾಯಕ್ಕೆ 1203 ಜನ ಫಲಾನುಭವಿಗಳು, ತಾಯಿ ಮಗು ಸಹಾಯ ಹಸ್ತ ಸೌಲಭ್ಯಕ್ಕೆ 158 ಜನ ಫಲಾನುಭವಿಗಳು ಹೆಸರು ನೋಂದಾಯಿಸಿ ಸೌಲಭ್ಯಗಳನ್ನು ಪಡೆದಿರುತ್ತಾರೆ ಎಂದು ತಿಳಿಸಿದರು.

ಕೊಪ್ಪಳ ಕಾರ್ಮಿಕ ಅಧಿಕಾರಿಗಳ ಕಚೇರಿಯಿಂದ ಈ ವರ್ಷದಲ್ಲಿ ವಿವಿಧ ಕಾರ್ಮಿಕ ಕಾಯ್ದೆ ಅಡಿ 14 ಪ್ರಕರಣ, ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆ ಅಡಿ, ಗುತ್ತಿಗೆ ಕಾರ್ಮಿಕ ಕಾಯ್ದೆಯಡಿ 07 ಪ್ರಕರಣ, ಬಾಲ ಕಾರ್ಮಿಕ ಕಾಯ್ದೆಯಡಿ 8 ಪ್ರಕರಣಗಳನ್ನು ಜೆ.ಎಂ. ಎಫ್.ಸಿ.ನ್ಯಾಯಾಲಯದಲ್ಲಿ ಹೂಡಲಾಗಿದೆ ಎಂದು ತಿಳಿಸಿದರು.

ವಿಜಯನಗರ ಜಿಲ್ಲೆಯ ಕಾರ್ಮಿಕ ಅಧಿಕಾರಿ ಸೂರಪ್ಪ ಅವರು ಮಾತನಾಡಿ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿಯ ನೋಂದಣಿ, ನವೀಕರಣ ಪ್ರಕ್ರಿಯೆ, ಸೌಲಭ್ಯಗಳ ಬಗ್ಗೆ ಹಾಗೂ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಯೋಜನೆಗಳ ಕುರಿತು ತಿಳಿಸಿದರು.

ಕಾರ್ಖಾನೆ ಮತ್ತು ಬಾಯ್ಲರ್ ಇಲಾಖೆಯ ಸಹಾಯಕ ನಿರ್ದೇಶಕರಾದ ವಿಜಯಕುಮಾರ ಮಾತನಾಡಿ, ಕಾರ್ಖಾನೆಗಳ ಕಾಯ್ದೆ 1948 (ಕಾರ್ಮಿಕರ ಸುರಕ್ಷತೆ), ಆಡಳಿತ ವರ್ಗ ಮತ್ತು ಕಾರ್ಮಿಕರ ನಡುವೆ ಸಮನ್ವಯತೆ ಮತ್ತು ಕಾರ್ಖಾನೆಗಳು ಮತ್ತು ಬಾಯ್ಲರ್ ಇಲಾಖೆಯಿಂದ ಕಾರ್ಮಿಕರ ಸುರಕ್ಷತೆ ಕುರಿತು ಹಾಗೂ ವಿಕಲಚೇತನರಿಗೆ ಕಾರ್ಖಾನೆಗಳಲ್ಲಿ ಉದ್ಯೋಗದ ಅವಕಾಶ ಹಾಗೂ ಆಶಾದೀಪ ಯೋಜನೆಗಳ ಕುರಿತು ವಿವರಿಸಿದರು.

ರಾಜ್ಯ ವಿಮಾ ಯೋಜನೆಯ ವಿಮಾ ವೈದ್ಯಾಧಿಕಾರಿ ಡಾ.ಶ್ರೀನಿವಾಸ ಅವರು ಮಾತನಾಡಿ ಕಾರ್ಮಿಕರ ರಾಜ್ಯ ವಿಮಾ ಯೋಜನೆಯಲ್ಲಿರುವ ಸೌಲಭ್ಯಗಳ ಬಗ್ಗೆ ತಿಳಿಸಿದರು.

ಜಿಲ್ಲಾ ಬಾಲಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕರಾದ ಬಸವರಾಜ ಹಿರೇಗೌಡ್ರ ಅವರು ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986, ತಿದ್ದುಪಡಿ ಕಾಯ್ದೆ 2016 ಬಗ್ಗೆ ಮಾಹಿತಿ ನೀಡಿದರು.

ಉದ್ಯೋಗದಲ್ಲಿ ಸ್ಥಳೀಯರಿಗೆ ಆದ್ಯತೆ ಮತ್ತು ದುಡಿಮೆ ಅವಧಿಯನ್ನು 14 ಗಂಟೆಗಳಿಗೆ ಹೆಚ್ಚಿಸುವ ಬಗ್ಗೆ ಅಭಿಪ್ರಾಯ ಸಂಗ್ರಹಣೆ ಮಾಡಲಾಯಿತು. ಕಾರ್ಯಾಗಾರದ ಕೊನೆಗೆ ಪ್ರಶ್ನೋತ್ತರ ನಡೆಯಿತು. ಸಮಾರಂಭದಲ್ಲಿ ಕಾರ್ಖಾನೆ ಮತ್ತು ಬಾಯ್ಲರ್ ಇಲಾಖೆಯ ಸಹಾಯಕ ನಿರ್ದೇಶಕರು, ರಾಜ್ಯ ವಿಮಾ ಯೋಜನೆಯ ಜಿಲ್ಲಾ ವಿಮಾ ವೈದ್ಯಾಧಿಕಾರಿಗಳು, ಕುಷ್ಟಗಿ ಮತ್ತು ಗಂಗಾವತಿ ತಾಲೂಕಿನ ಕಾರ್ಮಿಕ ನಿರೀಕ್ಷಕರಾದ ನಿವೇದಿತಾ, ಅಶೋಕ ಉಪಸ್ಥಿತರಿದ್ದರು. ಕಾರ್ಮಿಕರ ಕಲ್ಯಾಣ ಮಂಡಳಿಯ ಎಕ್ಸಿಕ್ಯೂಟಿವ್ ಹೇಮಂತ್ ವಂದಿಸಿದರು.

# ಅಲ್ಪಸಂಖ್ಯಾತರ ನರ್ಸಿಂಗ್ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ

■ **ಹಂಪಿ ಟೈಮ್ಸ್ ಹೊಸಪೇಟೆ**

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2024–25ನೇ ಸಾಲಿಗೆ ಬಿ.ಎಸ್.ಸಿ ನರ್ಸಿಂಗ್ ಮತ್ತು ಜಿ.ಎನ್.ಎಮ್. ನರ್ಸಿಂಗ್ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರೇತ್ಸಾಹಧನ ನೀಡಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿಲಾಗಿದೆ.

ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು. ಅಲ್ಪಸಂಖ್ಯಾತರ ಸಮುದಾಯಗಳಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಮತ್ತು ಪಾರ್ಸಿ ಸಮುದಾಯಕ್ಕೆ ಸೇರಿದ ವರಾಗಿರಬೇಕು. ಕೋರ್ಸ್‌ನ ಅವಧಿ– ಪೂರ್ಣಾವಧಿಯಾಗಿರಬೇಕು. ವಿದ್ಯಾರ್ಥಿಯ ಕುಟುಂಬದ ಒಟ್ಟು ವಾರ್ಷಿಕ ಆದಾಯವು ರೂ.2.50 ಲಕ್ಷಗಳನ್ನು ಮೀರಿರಬಾರದು. ವಿದ್ಯಾರ್ಥಿ ಗಳನ್ನು ಅನುದಾನದ ಲಭ್ಯತೆಯನುಸಾರ ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. ವಿದ್ಯಾರ್ಥಿಗಳು ಸದರಿ ಯೋಜನೆಯಡಿ ಉತ್ತೇಜನ ಮೊತ್ತವನ್ನು ಪಡೆಯಲು ಪ್ರತಿ ಶೈಕ್ಷಣಿಕ ವರ್ಷದಲ್ಲಿ ಹೊಸ ಅರ್ಜಿ ಸಲ್ಲಿಸಬೇಕು. ವಿದ್ಯಾರ್ಥಿಗಳು ತಮ್ಮ ಬ್ಯಾಂಕ್ ಖಾತೆಯೊಂದಿಗೆ ಆಧಾರ್ ಸೀಡಿಂಗ್ ಹಾಗೂ ಎನ್‌ಪಿಸಿಐ ಮ್ಯಾಪಿಂಗ್ ಆಗಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು.

ಆಸಕ್ತ ಅರ್ಹ ಅಭ್ಯರ್ಥಿಗಳು ಇಲಾಖಾ ವೆಬ್‌ಸೈಟ್ https://sevasi ndhu.karnataka.gov.in/sevasindhu/departme ntservices, ಲಿಂಕ್ ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ http://dom.karnataka.gov.in ಅನ್ನು ವೀಕ್ಷಿಸಿ ಅಥವಾ ವಿಜಯನಗರ ಜಿಲ್ಲಾ ಕಚೇರಿ ಮತ್ತು ಜಿಲ್ಲಾ ಹಾಗೂ ತಾಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಿಗೆ ಸಂಪರ್ಕಿಸಬಹುದು ಹಾಗೂ ಹೊಸಪೇಟೆ ಮೊ.ಸಂ: 8050435366, ಕೂಡ್ಲಿಗಿ ಮತ್ತು ಕೊಟ್ಟೂರು ಮೊ.ಸಂ: 9060330060, ಹರಪನಹಳ್ಳಿ ಮೊ.ಸಂ: 8494927891, ಹೂವಿನ ಹಡಗಲಿ ಮೊ.ಸಂ: 7353696984, ಹಗರಿಬೊಮ್ಮನಹಳ್ಳಿ ಮೊ.ಸಂ: 9980237242ಗೆ ಕರೆ ಮಾಡಿ ಮಾಹಿತಿ ಪಡೆಯಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ತಿಳಿಸಿದ್ದಾರೆ.



ತುಂಗಭದ್ರಾ ಜಲಾಶಯಕ್ಕೆ ಸಿಎಂ ಆಗಮನದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಎಸ್ಪಿ ಶ್ರೀಹರಿಬಾಬು ಸಿದ್ಧತೆ ಪರಿಶೀಲನೆ ನಡೆಸಿದರು.

## ಉದ್ಯೋಗ ಕೊಡಿ ಪ್ರಕಟಣೆ ಉಚಿತ!

ಕೆಲಸಕ್ಕೆ ಬೇಕಾಗಿದ್ದಾರೆ ಎಂದು ಉದ್ಯಮಿಗಳು ಜಾಹೀರಾತು ನೀಡುವುದು ಈವರೆಗೆ ನಡೆದು ಬಂದ ಪರಂಪರೆ. ಆದರೆ, ಬದಲಾದ ಜೀವನ ಶೈಲಿಯಲ್ಲಿ ಜಾಹೀರಾತು ಹಾಗೂ ಬೇಡಿಕೆಗಳು ಬದಲಾಗುತ್ತಿವೆ. ಈ ನಿಟ್ಟಿನಲ್ಲಿ ಪತ್ರಿಕೆ ಉದ್ಯಮಿಗಳನ್ನು ಭೇಟಿ ಮಾಡದೆ ಶಿಕ್ಷಣ, ಅನುಭವ ಸಹಿತ ನಿರುದ್ಯೋಗಿಗಳ ವಿವರ ನೀಡಿ 'ಉದ್ಯೋಗ ಕೊಡಿ' ಎಂಬ ಶೀರ್ಷಿಕೆಯಡಿ ನಿರುದ್ಯೋಗಿಗಳ ವಿವರ ಹಂಪಿ ಟೈಮ್ಸ್ ಪ್ರಕಟಿಸಿ, ಉದ್ಯಮಿ – ನಿರುದ್ಯೋಗಿಗಳಿಗೆ ಸೇತುವೆಯಾಗಲಿದೆ.

ಉದ್ಯೋಗ ಹುಡುಕುವ ನಿರುದ್ಯೋಗಿ ಗಳು, ಕೆಲಸ ಮಾಡಲೇ ಬೇಕೆಂಬ ಉದ್ಯೋಗಾಕಾಂಕ್ಷಿಗಳು ತಮ್ಮ ಸ್ವ–ವಿವರಗಳನ್ನು ಹಂಪಿ ಟೈಮ್ಸ್ ಇ–ಮೇಲ್‌ಗೆ ಕಳುಹಿಸಿದಲ್ಲಿ, ಕೆಲಸ ಕೊಡಿ ಕಾಲಂನಡಿ ಉಚಿತವಾಗಿ ಪ್ರಕಟಿಸಲಾಗುತ್ತದೆ. ಅರ್ಹತೆ ಆಧರಿಸಿ ಉದ್ಯಮಿಗಳೇ ಉದ್ಯೋಗಾಂಕ್ಷಿಗಳನ್ನು ಸಂಪರ್ಕಿಸಿ ಕೆಲಸ ನೀಡಲು ಇದು ಸಹಕಾರಿಯಾಗಲೆಂಬ ಸದಾಶಯ ಹಂಪಿ ಟೈಮ್ಸ್ ಬಳಗದ್ದಾಗಿದೆ. ನಿಮ್ಮ ಸ್ವ–ವಿವರವನ್ನು ಕೆಳಗಿನ ಇಮೇಲ್‌ಗೆ ಕಳುಹಿಸಿ. ಅಥವ ಕಚೇರಿಗೆ ತಲುಪಿಸಿ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
hampitimes@gmail.com
**9448633038**

# ಸ್ವಚ್ಛತೆಗೆ ಆದ್ಯತೆ ನೀಡೋಣ

### ಸ್ವಚ್ಛತಾ ಹಿ ಸೇವಾ ಅಭಿಯಾನದಲ್ಲಿ ವಿನೋದ್ ಕುಮಾರ್ ಹೇಳಿಕೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಸ್ವಚ್ಚತೆ ಕಾಪಾಡುವಲ್ಲಿ ನಮ್ಮನ್ನು ನಾವು ಮನಪೂರ್ವಕವಾಗಿ ತೊಡಗಿಸಿಕೊಂಡರೆ ರೋಗ ರುಜಿನುಗಳಿಂದ ಮುಕ್ತರಾಗಬಹುದು. ಮನೆಯಿಂದ ಗ್ರಾಮ, ಗ್ರಾಮದಿಂದ ರಾಷ್ಟ್ರಮಟ್ಟದವರಗೆ ಸ್ವಚ್ಚತೆಗೆ ಹೆಚ್ಚು ಆದ್ಯತೆ ನೀಡಬೇಕು ಎಂದು ಜಿಲ್ಲಾ ಪಂಚಾಯತ್‌ನ ಯೋಜನಾ ನಿರ್ದೇಶಕ ವಿನೋದ್ ಕುಮಾರ್ ಅವರು ಹೇಳಿದರು.

ಜಿಲ್ಲಾ ಪಂಚಾಯತ್, ಕೆನರಾ ಬ್ಯಾಂಕ್ ಪ್ರಾದೇಶಿಕ ಕಚೇರಿ ಇವರ ಸಹಯೋಗದಲ್ಲಿ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆಯ ಆವರಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಸ್ವಚ್ಛತಾ ಹಿ ಸೇವಾ ಅಭಿಯಾನ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೆನರಾ ಬ್ಯಾಂಕ್ ಪ್ರಾದೇಶಿಕ ಕಚೇರಿಯ ಸಹಾಯಕ ಮಹಾ ಪ್ರಬಂಧಕರಾದ ಡಿವಿಪಿಆರ್ ಮುರಳಿ ಕೃಷ್ಣ ಮಾತನಾಡಿ, ಸ್ವಚ್ಛತೆ ಎಂಬುದು ನಮ್ಮ ಮನೆಯಿಂದ ಪ್ರಾರಂಭವಾಗಬೇಕು ಇದರಲ್ಲಿ ನಾವೂ ಪ್ರತಿನಿತ್ಯ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕು ಎಂದು ಹೇಳಿದರು. ಕೆನರಾ ಬ್ಯಾಂಕ್ ಪ್ರಾದೇಶಿಕ ಕಚೇರಿಯ ಎಲ್‌ಡಿಎಮ್ ಗಿರೀಶ್ ವಿ.ಕುಲಕರ್ಣಿ ಮಾತನಾಡಿ, ನಮ್ಮ ಸುತ್ತಲಿನ ಪರಿಸರವನ್ನು ಸ್ವಚ್ಚವಾಗಿಡುವುದರ ಜೊತೆಗೆ ತ್ಯಾಜ್ಯ ವಸ್ತುಗಳ ಸರಿಯಾದ ಕ್ರಮದಲ್ಲಿ ವಿಲೇವಾರಿ ಮಾಡಬೇಕು. ಈ ನಿಟ್ಟಿನಲ್ಲಿ ಪ್ಲಾಸ್ಟಿಕ್ ಮುಕ್ತ ಪರಿಸರವನ್ನಾಗಿ ಮಾಡಲು ಎಲ್ಲರೂ ಶ್ರಮಿಸೋಣ ಎಂದು ತಿಳಿಸಿದರು.

ಈ ವೇಳೆ ಕೆನರಾ ಬ್ಯಾಂಕ್ ಪ್ರಾದೇಶಿಕ ಕಚೇರಿಯ ಹಿರಿಯ ವ್ಯವಸ್ಥಾಪಕ ರಾಜೇಶ್, ಕೆನರಾ ಬ್ಯಾಂಕ್ ಗ್ರಾಮೀಣ ಸ್ವ–ಉದ್ಯೋಗ ತರಬೇತಿ ಸಂಸ್ಥೆಯ ನಿರ್ದೇಶಕ ರಾಜೇಸಾಬ್ ಹೆಚ್.ಎರಿಮನಿ, ಆರ್ಥಿಕ ಸಮಾಲೋಚಕರಾದ ದಿನೇಶ್, ಜಡೆಪ್ಪ, ಚೆನ್ನಪ್ಪ, ಸಿದ್ದಲಿಂಗಮ್ಮ, ಸಂತೋಷ ಕುಮಾರ್ ಸೇರಿದಂತೆ 30 ಜನ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

# ಕುಡಿಯುವ ನೀರು ಸರಬರಾಜಿನಲ್ಲಿ ವ್ಯತ್ಯಯ

■ **ಹಂಪಿ ಟೈಮ್ಸ್ ಬಳ್ಳಾರಿ**

ನಗರದ ನಾರಾಯಣರಾವ್ ಪಾರ್ಕ್ ಹತ್ತಿರ ಎಂಎಸ್ ಪೈಪ್‌ಲೈನ್ ನ ಸ್ಥಳಾಂತರ ಕಾರ್ಯ ಕೈಗೊಳ್ಳುತ್ತಿರುವುದರಿಂದ ಬಳ್ಳಾರಿ ಮಹಾನಗರ ಪಾಲಿಕೆ ವ್ಯಾಪ್ತಿಯ 07 ನೇ ವಾರ್ಡ್‌ನಿಂದ 20 ನೇ ವಾರ್ಡ್‌ವರೆಗಿನ ಪ್ರದೇಶಗಳಲ್ಲಿ ಸೆ.23 ರಿಂದ ಸೆ.26ರವರೆಗೆ ಕುಡಿಯುವ ನೀರಿನ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು, ನಗರವಾಸಿಗಳು ಹಾಗೂ ಸಾರ್ವಜನಿಕರು ಸಹಕರಿಸಬೇಕು ಎಂದು ಬಳ್ಳಾರಿ ಮಹಾನಗರ ಪಾಲಿಕೆ ಮತ್ತು ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯ ಬಳ್ಳಾರಿ ವಿಭಾಗ ಕಚೇರಿ ತಿಳಿಸಿದೆ.

# ಕರ್ನಾಟಕ ಸಾಹಿತ್ಯ ಅಕಾಡೆಮಿ: ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಕರ್ನಾಟಕ ಸಾಹಿತ್ಯ ಅಕಾಡೆಮಿ ವತಿಯಿಂದ ಹಾವೇರಿ ಜಿಲ್ಲೆಯ ಗೋಟಗೋಡಿಯಲ್ಲಿನ ಕರ್ನಾಟಕಜಾನಪದವಿಶ್ವವಿದ್ಯಾಲಯದಸಹಯೋಗದಲ್ಲಿಗಿರಿಜನಉಪಯೋಜನೆಯಡಿ ಅಕ್ಟೋಬರ್ ಕೊನೆಯ ವಾರದಲ್ಲಿ 3 ದಿನಗಳ ಕಮ್ಮಟ ಕಾರ್ಯಕ್ರಮ ಏರ್ಪಡಿಸಲಾಗಿದ್ದು, ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

'ಕನ್ನಡ ಸಾಹಿತ್ಯ ಮತ್ತು ಸಾಂವಿಧಾನಿಕ ಮೌಲ್ಯಗಳು' ಎಂಬ ಹೆಸರಿನಡಿ ಹಾವೇರಿ ಜಿಲ್ಲೆಯ ಗೋಟಗೋಡಿಯಲ್ಲಿನ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದೆ. ಅರ್ಜಿದಾರರು 20 ರಿಂದ 45 ವಯೋಮಿತಿ ಹೊಂದಿದ್ದು, ಪರಿಶಿಷ್ಟ ಪಂಗಡಕ್ಕೆ ಸೇರಿದ ರಾಜ್ಯದ ಎಲ್ಲಾ ಭಾಗದ ಅಭ್ಯರ್ಥಿಗಳು ಅ.08 ರೊಳಗಾಗಿ ಅರ್ಜಿ ಸಲ್ಲಿಸಬೇಕು.

ಆಸಕ್ತ ಅಭ್ಯರ್ಥಿಗಳು ಕರ್ನಾಟಕ ಸಾಹಿತ್ಯ ಅಕಾಡೆಮಿ ವೆಬ್‌ಸೈಟ್ http://karnatakasahithyaacademy.org ಲಿಂಕ್ ಗೆ ಭೇಟಿ ನೀಡಿ ಅರ್ಜಿ ನಮೂನೆ ಮತ್ತು ಹೆಚ್ಚಿನ ವಿವರ ಪಡೆದುಕೊಳ್ಳಬಹುದು ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಕರಿಯಪ್ಪ.ಎನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi

ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC; ಸಮಾಜ ವಿಜ್ಞಾನ

## ಅಧ್ಯಾಯ : 6 ಭಾರತಕ್ಕಿರುವ ಸವಾಲುಗಳು ಹಾಗೂ ಅವುಗಳ ಪರಿಹಾರೋಪಾಯಗಳು

**1.) ಕೋಮುವಾದ ಎಂದರೇನು? (ಎ.2023)**

**ಉತ್ತರ:–** ಧರ್ಮದ ಆಧಾರದ ಮೇಲೆ ಸಮಾಜದ ವಿಭಜನೆ ಹಾಗೂ ಪರಸ್ಪರ ವೈಷಮ್ಯ ಬೆಳೆಸಿಕೊಳ್ಳುವುದನ್ನು ಕೋಮುವಾದ ಎನ್ನುವರು

**2) ಪ್ರಾದೇಶಿಕವಾದ ಎಂದರೇನು?**

**ಉತ್ತರ:–** ಒಂದು ನಿರ್ದಿಷ್ಟ ಪ್ರದೇಶದ ಜನರು ತಾವು ವಾಸಿಸುವ ಪ್ರದೇಶವನ್ನು ಅತಿಯಾಗಿ ಪ್ರೀತಿಸುವುದನ್ನು ಪ್ರಾದೇಶಿಕವಾದ ಎನ್ನುವರು

**3) ಲಾಭಕೋರತನ ಎಂದರೇನು?**

**ಉತ್ತರ:–**ಬಳಕೆದಾರರಿಂದ ಅಧಿಕ ಹಣ ವಸೂಲಿ ಮಾಡಿ ಹೆಚ್ಚಿನ ಲಾಭ ಗಳಿಸುವ ಧೋರಣೆಯನ್ನು ಲಾಭಕೋರತನ ಎನ್ನುವರು

**4) ಡಾ. ಡಿ ಎಂ ನಂಜುಂಡಪ್ಪ ಸಮಿತಿಯನ್ನು ಏಕೆ ರಚಿಸಲಾಯಿತು? (ಎ.2023)**

**ಉತ್ತರ:–** ಪ್ರಾದೇಶಿಕ ಅಸಮತೋಲನವನ್ನು ನಿವಾರಿಸಲು ಕರ್ನಾಟಕದಲ್ಲಿ ಡಿ. ಎಂ. ನಂಜುಂಡಪ್ಪ ಸಮಿತಿಯನ್ನು ರಚಿಸಲಾಯಿತು

**5) ಕರ್ನಾಟಕದ ಪ್ರಾದೇಶಿಕಅಸಮತೋಲನದ ನಿವಾರಣೆಗೆ ಕೈಗೊಂಡಿರುವ ಕ್ರಮಗಳಾವುವು?**

**ಉತ್ತರ:–** * ಡಾ.ಡಿ.ಎಂ.ನಂಜುಂಡಪ್ಪ ಸಮಿತಿ * ಮಲೆನಾಡು ಅಭಿವೃದ್ಧಿ ಸಮಿತಿ * ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ, * ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ * ಕರಾವಳಿ ಅಭಿವೃದ್ಧಿ ಪ್ರಾಧಿಕಾರಗಳನ್ನು ರಚಿಸಲಾಗಿದೆ. *. ಕಲ್ಯಾಣ ಕರ್ನಾಟಕ ಭಾಗದ 7 ಜಿಲ್ಲೆಗಳಿಗೆ ವಿಶೇಷ ಮಾನ್ಯತೆ 371 (ಜೆ) ವಿಧಿಯ ಅಡಿಯಲ್ಲಿ ನೀಡಲಾಗಿದೆ

**6) ಕೋಮುವಾದ ದೇಶದ ಐಕ್ಯತೆಗೆ ಮಾರಕ ಹೇಗೆ?**

**ಉತ್ತರ:–** 1. ಕೋಮುವಾದವು ಸಾಮಾಜಿಕವಾಗಿ ಭಿನ್ನತೆಗೆ ಕಾರಣವಾಗಿದೆ, 2. ಪರಸ್ಪರ ಅಪನಂಬಿಕೆಗೆ ಕಾರಣವಾಗಿದೆ.
3. ಭಯದ ವಾತಾವರಣವನ್ನು ಸೃಷ್ಟಿಸುತ್ತದೆ.
4. ಕೋಮುವಾದವು ಸಮಾಜದಲ್ಲಿ ಗುಂಪುಗಾರಿಕೆಯನ್ನು ಸೃಷ್ಟಿಸುತ್ತದೆ.
5. ಸಮಾಜದ ನೆಮ್ಮದಿಯನ್ನು ಕೆಡಿಸುತ್ತದೆ
6. ದೇಶದ ಏಕತೆಗೆ ಸಮಗ್ರತೆಗೆ ಧಕ್ಕೆಯಾಗುತ್ತದೆ.
7. ವ್ಯಕ್ತಿಗಳ ಜೀವ ಹಾಗೂ ಸೊತ್ತುಗಳ ನಾಶಕ್ಕೂ ಕಾರಣವಾಗುತ್ತದೆ.
8. ಗುಂಪುಗಳ ಮಧ್ಯೆ ಪರಸ್ಪರ ದೋಷಾರೋಪಣಗೆ ಕಾರಣವಾಗುತ್ತದೆ.
9 ದೈಹಿಕ ಹಲ್ಲೆಗಳಿಗೆ ಕಾರಣವಾಗುತ್ತದೆ

**7) ಕೋಮುವಾದವನ್ನು ನಿಯಂತ್ರಿಸಲು ಕೈಗೊಳ್ಳಬೇಕಾದ ಕ್ರಮಗಳು ಯಾವುವು? (ಜೂ 2020)**

**ಉತ್ತರ:–** 1 ಏಕರೂಪ ನಾಗರಿಕ ಸಂಹಿತೆ, 2. ಜಾತ್ಯತೀತ ಮನೋಭಾವ 3. ಶಿಕ್ಷಣದಲ್ಲಿ ಜಾತ್ಯತೀತ ತತ್ವ 4. ರಾಷ್ಟ್ರೀಯ ವಾದವನ್ನು ಬೆಳೆಸುವುದು, 5. ಜನರಲ್ಲಿ ಜಾಗೃತಿ ಮೂಡಿಸುವುದು, 6. ರಾಷ್ಟ್ರೀಯತೆಯ ಚಿಂತನೆಗಳಿಗೆ ಆದ್ಯತೆ

**8) ಅನಕ್ಷರತೆಯನ್ನು ಹೋಗಲಾಡಿಸಲು ಕೈಗೊಂಡಿರುವ ಕ್ರಮಗಳಾವುವು? ಏ–2023)/ ಸಾಕ್ಷರತೆಯನ್ನು ವೃದ್ಧಿಸಲು ಕೈಗೊಂಡಿರುವ ಕ್ರಮಗಳಾವುವು? (ಜೂ.2023, ಎ.2024)**

**ಉತ್ತರ:–** 1. 6 ರಿಂದ 14 ವಯೋಮಾನದವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ.
2. 1988ರಲ್ಲಿ 'ರಾಷ್ಟ್ರೀಯ ಸಾಕ್ಷರತಾ ಮಿಷನ್' ಆರಂಭಿಸಿದೆ
3. 2001ರಲ್ಲಿ ಸರ್ವಶಿಕ್ಷಣ ಅಭಿಯಾನ ಜಾರಿಗೆ ತರಲಾಗಿದೆ
4. ಶಿಕ್ಷಣ ಹಕ್ಕು ಕಾಯ್ದೆ 2009 (RTE) ಜಾರಿಗೆ ತರಲಾಗಿದೆ
5. 2009 ರಲ್ಲಿ 'ಸಾಕ್ಷರ ಭಾರತ ಕಾರ್ಯಕ್ರಮ ಜಾರಿಗೆ ತರಲಾಗಿದೆ
6. 2018 ರಲ್ಲಿ ಸಮಗ್ರ ಶಿಕ್ಷಾ ಜಾರಿಗೆ ತರಲಾಗಿದೆ
7. ವಿಕಲ ಚೇತನರ ಶಿಕ್ಷಣ ಮತ್ತು ಮಹಿಳಾ ಶಿಕ್ಷಣಕ್ಕೆ ಆದ್ಯತೆ ನೀಡಲಾಗಿದೆ
8. 21ಎ ವಿಧಿಯನ್ವಯ ಶಿಕ್ಷಣ ಮೂಲಭೂತ ಹಕ್ಕು ಸಾರಿದೆ
9. ನವಭಾರತ ಸಾಕ್ಷರತಾ ಜಾರಿಗೆ ತರಲಾಗಿದೆ

**9. ಭ್ರಷ್ಟಾಚಾರವನ್ನು ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳಾವುವು?**

**ಉತ್ತರ:–** 1. ಭಾರತ ಸರ್ಕಾರವು ಲೋಕಪಾಲ ಸಂಸ್ಥೆಯನ್ನು ಸ್ಥಾಪಿಸಿದೆ,
2. ರಾಜ್ಯಗಳಲ್ಲಿ ಲೋಕಾಯುಕ್ತ ಸಂಸ್ಥೆಯನ್ನು ಸ್ಥಾಪಿಸಲಾಗಿದೆ,
3. ಕೇಂದ್ರೀಯ ಜಾಗೃತದಳವನ್ನು ಸ್ಥಾಪಿಸಲಾಗಿದೆ,
4. ಭ್ರಷ್ಟಾಚಾರ ತಡೆ ಕಾಯಿದೆ(1988)ಯನ್ನು ಜಾರಿಗೆ ತರಲಾಗಿದೆ.
5. ಮಾಹಿತಿ ಹಕ್ಕು ಕಾಯಿದೆ(2005) ಯನ್ನು ಜಾರಿಗೊಳಿಸಲಾಗಿದೆ.
6. ಸರ್ಕಾರಿ ಕಛೇರಿಗಳಲ್ಲಿ ಸಿ.ಸಿ.ಕ್ಯಾಮೆರಾಗಳನ್ನು ಅಳವಡಿಸಲಾಗಿದೆ,
7. ಕಡತಗಳ ತ್ವರಿತ ವಿಲೇವಾರಿಗಾಗಿ ಇ–ಆಫೀಸ್ ವ್ಯವಸ್ಥೆ ಜಾರಿಗೊಳಿಸಲಾಗಿದೆ.
8. ಸಕಾಲ, ಜನಸ್ಪಂದನ, ಜನಸೇವಕ ಮೊದಲಾದ ಯೋಜನೆಗಳನ್ನು ಜಾರಿಗೊಳಿಸಲಾಗಿದೆ.
9. ಸರ್ಕಾರಿ ಕಛೇರಿಗಳಲ್ಲಿ ದೂರು ಪೆಟ್ಟಿಗೆಗಳನ್ನು ಇಡಲಾಗಿದೆ

**10) ಲಿಂಗ ತಾರತಮ್ಯವನ್ನು ಹೋಗಲಾಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು? ಅಥವಾ ಮಹಿಳೆಯರ ಸ್ಥಾನಮಾನ ಉತ್ತಮ ಪಡಿಸಲು ಸಲಹೆಗಳೇನು? (ಸೆ.2022, ಎ.2024)**

**ಉತ್ತರ:–** 1. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸ್ಥಾಪಿಸಲಾಗಿದೆ
2. ಸರ್ಕಾರಿ ಉದ್ಯೋಗಗಳಲ್ಲಿ ಮಹಿಳಾ ಮೀಸಲಾತಿ ನೀಡಲಾಗಿದೆ
3. ಕರ್ನಾಟಕದ ಸ್ಥಳೀಯ ಸಂಸ್ಥೆಗಳಲ್ಲಿ ಶೇ. 50ರಷ್ಟು ಸ್ಥಾನಗಳನ್ನು ಮೀಸಲಾತಿ,
4. ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ,
5. ರಾಷ್ಟ್ರೀಯ ಹಾಗೂ ರಾಜ್ಯ ಮಹಿಳಾ ಆಯೋಗ
6. ಮಹಿಳಾ ಅಭಿವೃದ್ಧಿ ನಿಗಮ ಸ್ಥಾಪಿಸಲಾಗಿದೆ
7. 'ಸಖಿ ಒನ್ ಸ್ಟಾಪ್ ಸೆಂಟರ' ಗಳನ್ನು ಆರಂಭಿಸಲಾಗಿದೆ
8. ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ರಕ್ಷಣೆ ಕಾಯಿದೆ (2005) ಜಾರಿಗೊಳಿಸಲಾಗಿದೆ
9. ಮಹಿಳೆಯರ ಲೈಂಗಿಕ ಕಿರುಕುಳ ನಿಷೇಧ ಕಾಯಿದೆ (2013) ಜಾರಿಗೊಳಿಸಲಾಗಿದೆ,
10. ಮಹಿಳಾ ಸಹಾಯವಾಣಿ 1091 ಸೌಲಭ್ಯ ಕಲ್ಪಿಸಲಾಗಿದೆ

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : **ಕೊಟ್ರೇಶ್ ಮಾಳಿಗಿ, ಸಮಾಜ ವಿಜ್ಞಾನ ಶಿಕ್ಷಕರು,** ಬ್ಯಾಸಿಗಿದೇರಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

**ಕ.ರಾ.ಮಕ್ಕಳ ಸಾಹಿತ್ಯ ಪರಿಷತ್, ವಿಜಯನಗರ ಜಿಲ್ಲೆ**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055